(ಗೊಂದಲ)

ಅಧ್ಯಕ್ಷರು : ಇದನ್ನು ನಂತರ ತೆಗೆದುಕೊಳ್ಳೋಣ. ಈಗ ಕಾವೇರಿ ವಿಚಾರ.

3. ಕಾವೇರಿ ವಿಚಾರದಲ್ಲಿ ಮಾನ್ಯ ಮಂತ್ರಿಗಳ ಹೇಳಿಕೆ

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು):– ಮಾನ್ಯ ಅಧ್ಯಕ್ಷರೆ, ಕಾವೇರಿ ವಿಚಾರದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಕೇಂದ್ರ ಜಲ ಆಯೋಗದ ಒಂದು ನಿಯೋಗ ಹೋಗಿ ಬಂದ ಮೇಲೆ 2.44 ಟಿ.ಎಂ.ಸಿ. ನೀರನ್ನು ಬಿಡಬೇಕೆಂದು ಆದೇಶವಾಗಿದೆ. ಅಂದು ಸದನ ನಡೆಯುತ್ತಿತ್ತು, ಆ ಸಂದರ್ಭದಲ್ಲಿ ನಮ್ಮ ಹಿರಿಯ ನ್ಯಾಯಾವಾದಿಗಳಾದ ಶ್ರೀ ನಾರಿಮನ್ ಜೊತೆ ಚರ್ಚೆ ಮಾಡುತ್ತೇವೆ ಮತ್ತು ಪುನರ್ ಪರಿಶೀಲನಾ ಅರ್ಜಿಯನ್ನು ಹಾಕುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆಂಬ ಮಾತನ್ನೂ ಸಹ ಹೇಳಿದ್ದೆವು. ಆ ಪ್ರಕಾರವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ನಾವು ದೆಹಲಿಗೆ ಹೋಗಿ ಅಲ್ಲಿ ಸುದೀರ್ಘವಾದ ಚರ್ಚೆಯನ್ನು ಮಾಡಿದ ಸಂದರ್ಭದಲ್ಲಿ ಶ್ರೀ ನಾರಿಮನ್ ಅವರು ನೀವು comply ಮಾಡುವುದಕ್ಕೆ ಪ್ರಾರಂಭ ಮಾಡಲೇಬೇಕು, ಅಂದರೆ ಮಾತ್ರ Review Petition ಗೆ ಬೆಲೆ ಬರುತ್ತದೆ ಎನ್ನುವ ಮಾತನ್ನೂ ಸಹ ಹೇಳಿದರು. ಆ ಮಾತನ್ನು ಸರ್ವ ಪಕ್ಷದ ಸಭೆಯಲ್ಲಿಯೂ ಸಹ ಹೇಳಿದ್ದೆವು. ಆ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ Floor Leaders ಎಲ್ಲರೂ ಕುಡಿಯುವ ನೀರಿಗೆ ಬೆಂಗಳೂರು, ಮೈಸೂರಿನಲ್ಲಿ ಸಂಕಷ್ಟವಿದೆ, ನೀರನ್ನು ಬಿಡುವುದಕ್ಕೆ ಸಾಧ್ಯವಾಗುವುದಿಲ್ಲವೆನ್ನುವ ಪರಿಸ್ಥಿತಿ ಇದೆಯೆಂದು ಹೇಳಿ, ಆದ್ದರಿಂದ ತಾವು ದಯವಿಟ್ಟು ಮತ್ತೊಮ್ಮೆ ಶ್ರೀ ನಾರಿಮನ್ ಅವರ ಜೊತೆಯಲ್ಲಿ ಮಾತನಾಡಿ, ಬಿಡುವುದಕ್ಕೆ ಆಗುವುದಿಲ್ಲ ಎನ್ನುವ ವಿಚಾರನ್ನು ಹೇಳಿ ಮತ್ತು ಬಿಡಬಾರದು, ಪುನರ್ ಪರಿಶೀಲಟಿಂ ಅರ್ಜಿಯಲ್ಲಿ ಏನಾಗುತ್ತದೆಯೆಂಬುದನ್ನು ನೋಡಿ, ತದನಂತರ ಅದಕ್ಕೆ ನಾವು ಕ್ರಮವನ್ನು ತೆಗೆದುಕೊಳ್ಳಬೇಕೆಂಬ ವಿಚಾರವನ್ನು ಹೇಳಿದ್ದರು. ಆ ಪ್ರಕಾರವಾಗಿ ಕೂಡಲೆ ನಾವು ನಾರಿಮನ್ ಅವರ ಜೊತೆಯಲ್ಲಿ ಚರ್ಚೆ ಮಾಡಿದ ಸಂದರ್ಭದಲ್ಲಿ, ಅವರು, ಹಿಂದಿನ ನನ್ನ ಎಲ್ಲಾ ಅನುಭವದ ಹಿನ್ನೆಲೆಯಲ್ಲಿ

ಹೇಳುವುದಾದರೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಒಂದು ಸಾರಿ ಆದೇಶ ಮಾಡಿದ ಮೇಲೆ, ಅದಕ್ಕೆ ಮೊದಲು compliance ಪ್ರಾರಂಭ ಮಾಡಿದರೆ ಮಾತ್ರ Review Petition ಗೆ ಬೆಲೆ ಬರುತ್ತದೆ, ಇಲ್ಲದಿದ್ದರೆ ಅದಕ್ಕೆ ಬೆಲೆ ಬರುವುದಿಲ್ಲ. ಆದ್ದರಿಂದ ಅಲ್ಲಿ ನಾನು ಎದ್ದು ನಿಂತು ಮಾತನಾಡುವ ಸಂದರ್ಭದಲ್ಲಿ ಮೊದಲೇ ಪ್ರಶ್ನೆಯನ್ನು comply ಮಾಡಿದ್ದೀರಾ ಎಂದು ಕೇಳುತ್ತಾರೆ. ಒಂದು ವೇಳೆ comply ಮಾಡಿಲ್ಲವೆಂದರೆ ಅಲ್ಲಿಯೇ ಡಿಸ್‌ಮಿಸ್ ಮಾಡುತ್ತಾರೆ and they might come heavily on us. ಪ್ರಥಮ ಬಾರಿಗೆ ತಮಿಳುನಾಡಿನ ಕ್ಲೇಮ್‌ವನ್ನು ಬೋಗಸ್ ಎನ್ನುವುದನ್ನು ನಾವು ಜಗತ್ತಿಗೆ ತೋರಿಸಿ ಕೊಟ್ಟಿದ್ದೇವೆ. ಅವರು 12 ಟಿ.ಎಂ.ಸಿ, 14 ಟಿ.ಎಂ.ಸಿ. ಎಂದು ಏನು ಕ್ಲೇಮು ಮಾಡಿದ್ದಾರೋ ಅದು ಸುಳ್ಳು ಎಂದು ಕೇಂದ್ರ ಜಲ ಆಯೋಗವೇ ಹೇಳಿದಂತಹ ಈ ಸಂದರ್ಭದಲ್ಲಿ, ಅವರಿಗೆ ಅಂದು ಕೋರ್ಟಿನಲ್ಲಿ ದೊಡ್ಡ ಪ್ರಮಾಣದ ವಾಗ್ದಂಡನೆ ಆಗಿದೆ. ಆದ್ದರಿಂದ ಅವರು ಕೂಡ ಸುಮ್ಮನಿರುವುದಲ್ಲ. ಈ Advantage ನ್ನು ನಾವು ತೆಗೆದುಕೊಳ್ಳಬೇಕಾದರೆ, ನೀವು ಮೊದಲು comply ಮಾಡಬೇಕು. ಎನ್ನುವ ವಿಚಾರವನ್ನು ಹೇಳಿದರು. ಅಗ, ನಾವೆಲ್ಲರೂ ಕೂಡ ಚರ್ಚೆಯನ್ನು ಮಾಡಿ, ನಾವು ಕೂಡಲೆ ಸ್ವಲ್ಪ ಮಟ್ಟಿಗೆ comply ನ್ನು ಪ್ರಾರಂಭ ಮಾಡೋಣ, ನಮ್ಮ ವಕೀಲರಿಗೆ Review Petition ಹಾಕುವುದಷ್ಟೇ ಅಲ್ಲ, ಈಗಾಗಲೇ Civil Appeals ಅನ್ನು ಕೂಡಲೆ ತೆಗೆದುಕೊಳ್ಳಿ ಎಂದು IA ಕೂಡ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಹಾಕಿದ್ದೇವೆ. ಆ ಒಂದು IA ಕೂಡ ಅನುಕೂಲವಾಗುತ್ತದೆ. ನಾವು ಏನಾದರೂ ಮಾಡದಿದ್ದರೆ ಆ IA ಗೆ ಕೂಡ ತೊಂದರೆಯಗುತ್ತದೆ ಎನ್ನುವ ಮಾತನ್ನು ಶ್ರೀ ನಾರಿಮನ್ ಅವರು ಹೇಳಿದ್ದರು ಆ ಹಿನ್ನೆಲೆಯಲ್ಲಿ 2 ಸಾವಿರ ಕ್ಯೂಸೆಕ್ಸ್‌ನ್ನು ನಾವು ಮೊನ್ನೆಯಿಂದ ಬಿಡುತ್ತಿದ್ದೇವೆ. ಒಂದು ಮಾತನ್ನು ಇಲ್ಲಿ ಹೇಳಬೇಕೋ ಬೇಡವೋ ಗೊತ್ತಿಲ್ಲ, ಆ ಭಾಗದ ಶಾಸಕರಿಗೂ ಕೂಡ ಕೆಲವು ವಿಚಾರಗಳು ಗೊತ್ತಿದೆ. ನಾನು ಅದನ್ನು ಬಹಿರಂಗವಾಗಿ ಹೇಳುವುದಿಲ್ಲ. ಆ ನೀರು ಎಲ್ಲೆಲ್ಲಿದೆ, ಎಲ್ಲಿಯವರೆಗೆ ಇದೆ, ಅದರ ಉಪಯೋಗ ಯಾರಿಗಿದೆ ಏನಿದೆ ಎನ್ನುವುದನ್ನು ನಾನು ಇಂದು ಸದನದಲ್ಲಿ ಬಹಳ ಸೂಚ್ಯವಾಗಿ ಹೇಳುತ್ತಿದ್ದೇವೆ. ಸುಪ್ರೀಂ ಕೋರ್ಟ್ ಮುಂದೆ ಮತ್ತೆ ಹಲವಾರು ಬಾರಿ ಈ ಪ್ರಸಂಗ ಬರುವುದರಿಂದ ನಾನು

ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಆ ಎಲ್ಲಾ ಹಿನ್ನೆಲೆಯಲ್ಲಿ ನಾವು ಅಂದರೆ ಸರ್ಕಾರ ಬುದ್ಧಿವಂತಿಕೆಯನ್ನು ಮಾಡಿದೆ. ಅದರ ಒಂದು ವಿಚಾರಣೆಯಾಗಿ ಇಂದು ಸಂಜೆಯೊಳಗೆ ನಮ್ಮ ವಕೀಲರು ಒಂದು Review Petition ಹಾಕುತ್ತಾರೆ, ನಂತರ ಪ್ರೊಸೀಡಿಂಗ್ಸ್ ಬರುತ್ತದೆ. ಅದಾದ ನಂತರ ಅಂತಿಮವಾದ ನಿರ್ಣಯಗಳನ್ನು ನಾವು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇದರ ಹಿನ್ನೆಲೆಯಲ್ಲಿ ಆದೇಶಗಳು ಬಂದಾಗ ನಾವು ಪಾಲನೆ ಮಾಡದಿರುವ ಸಂದರ್ಭದಲ್ಲಿ ಏನಾಗಿದೆ ಹಾಗೂ ಪಾಲನೆ ಮಾಡಿದ ಸಂದರ್ಭದಲ್ಲಿ ಏನಾಗಿದೆ ಎಂಬುದು ನಮ್ಮ ಮುಂದಿದೆ. ಅದರ ಬಗ್ಗೆ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಪಾಲನೆ ಮಾಡಿದಂತಹ ಸಂದರ್ಭದಲ್ಲಿ ultimately ನಾವು contempt ನ್ನು ಎದುರಿಸಿ ಪಾಲನೆ ಮಾಡಿರುವಂತಹ ಸ್ಥಿತಿಯನ್ನು ತಾವು ನೋಡಿದ್ದೀರಿ. ಇದು ಬಹಳ ಸಂಕಷ್ಟದ ಸಮಯ. 2003 ರಲ್ಲಿ ಇಂತಹ ಸಂಕಷ್ಟವನ್ನು ಸರ್ಕಾರ ಎದುರಿಸಿತ್ತು. ಆ ಸಮಯದಲ್ಲೂ ಕೂಡ ಫೆಬ್ರವರಿಯಲ್ಲಿ ನೀರು ಬಿಡಿ ಎಂದು ಹೇಳಿದ್ದರು. ಆ ಸಮಯದಲ್ಲೂ ಸಹ ಇದೇ ರೀತಿಯ ಪರಿಸ್ಥಿತಿ ಇದ್ದಾಗಲೂ ಸರ್ಕಾರ ಅದನ್ನು ನಿಭಾಯಿಸಿದೆ. ಅದೇ ರೀತಿ ಈ ಸರ್ಕಾರವು ನಿಭಾಯಿಸುತ್ತದೆ. ಅದರಲ್ಲಿ ಎರಡು ಮಾತಿಲ್ಲ. ಇದರ ಜೊತೆಗೆ ಮೊನ್ನೆ ಸಿ.ಆರ್.ಎ. ಆದೇಶವನ್ನು ಒಂದು ವಾರ ಪಾಲನೇ ಮಾಡದೇ ಸುಪ್ರೀಂ ಕೋರ್ಟ್ ಮುಂದೆ ಹೋದಾಗ First you comply and come. ಎನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ಇದೇ IA ನಲ್ಲಿ ಹೇಳಿದ್ದಾರೆ. ಈ ಎಲ್ಲಾ ಹಿನ್ನೆಲೆಯಲ್ಲಿ, ನಮ್ಮ ರಾಜ್ಯದ ಸುದೀರ್ಘವಾಗಿರುವಂತಹ ಈ ಹೋರಾಟದ ದುರದೃಷ್ಟಿಯನ್ನಿಟ್ಟುಕೊಂಡು ಇವತ್ತು ನಾವು, ಅತ್ಯಲ್ಪ ರಿಲೀಸ್‌ನ್ನು ನಾವು ಸೂಕ್ಷ್ಮವಾಗಿ ಮಾಡಿದ್ದೇವೆ. ಈ ಹಿಂದೆ ತಾವೆಲ್ಲಾ ಆಡಳಿತ ಪಕ್ಷದಲ್ಲಿದ್ದಿರಿ, ಕಾವೇರಿ ವಿಚಾರದ ಸಂದರ್ಭದಲ್ಲಿ ಎಂತೆಂತಹ ಪ್ರಸಂಗ ಸಮಸ್ಯೆ ಬಂದರೂ ನಿಭಾಯಿಸಿದ್ದೀರಿ. ತಾವು, ಇಡೀ ಸದನವೇ ಇದನ್ನೆಲ್ಲಾ ಅರ್ಥಮಾಡಿಕೊಂಡು, ರೈತರೂ ಸಹ ಇದನ್ನು ಅರ್ಥಮಾಡಿಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ಇದರಿಂದ ನಮಗೆ ಸ್ವಲ್ಪಮಟ್ಟಿಗೆ ತೊಂದರೆಯಾಗುತ್ತದೆ. ನಮಗೂ ಇದರಿಂದ ನೋವಿದೆ. ಆದರೂ ಕೂಡ ದೂರದೃಷ್ಟಿಯನ್ನಿಟ್ಟುಕೊಂಡು ಈ ಕೆಲಸವನ್ನು ಮಾಡಿದ್ದೇವೆ. Review Petition ಹಾಕಿದಂತಹ ಸಂದರ್ಭದಲ್ಲಿ,

ಕೋರ್ಟಿನಲ್ಲಿ ಏನಾಗುತ್ತದೆಂಬುದನ್ನು ನೋಡಿಕೊಂಡು ಮುಂದಿನ ಕ್ರಮವನ್ನು ಜರುಗಿಸೋಣ. ನಮ್ಮ ಇವತ್ತಿನ ಜಲಾಶಯಗಳಮಟ್ಟ ಒಟ್ಟಾರೆ ಹೇಳುವುದಾ-ದರೆ, ಕೆ.ಆರ್.ಎಸ್. ನಲ್ಲಿ 6.702 ಟಿ.ಎಂ.ಸಿ ಹೇಮಾವತಿಯಲ್ಲಿ 5.23 ಟಿ.ಎಂ.ಸಿ, ಕಬಿನಿಯಲ್ಲಿ 0.1 ಟಿ.ಎಂ.ಸಿ, ಹಾರಂಗಿಯಲ್ಲಿ 0.12 ಟಿ.ಎಂ.ಸಿ. ಇದೆ. ಒಟ್ಟು 13.31 ಟಿ.ಎಂ.ಸಿ. ಇದೆ. 1,994 ಟಿ.ಎಂ.ಸಿ. Plus 50ಗೇಟ್‌ನಲ್ಲಿ ಕಳೆದ 2 ದಿವಸದಿಂದ ನೀರನ್ನು ಬಿಡುತ್ತಿದ್ದೇವೆ. ಸೂಚ್ಯವಾಗಿ ಹೇಳುವುದಾದರೆ ಒಟ್ಟಾರೆ ಬಿಳಿಗುಂಡ್ಲು ಕೆ.ಆರ್.ಎಸ್. ನಿಂದ 220 ಕಿ.ಮೀ. ದೂರದಲ್ಲಿದೆ. ಅದರಿಂದ ನೀರು ಎಲ್ಲಿಗೆ, ಹೇಗೆ ಟ್ರಾವೆಲ್ ಆಗುತ್ತದೆ ಎಂಬುದು ತಮ್ಮೆಲ್ಲರಿಗೂ ಗೊತ್ತಿರುವಂತಹ ವಿಚಾರವೆಂದು ನಾನು ಭಾವಿಸುತ್ತೇನೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ : ಪ್ರಾಮಾಣಿಕವಾದ ಉತ್ತರವನ್ನು ಮಾನ್ಯ ಸಚಿವರಿಂದ ——

ಅಧ್ಯಕ್ಷರು : ಸದನದಲ್ಲಿ ಹೇಳಿರುವುದನ್ನು ಮತ್ತೇಕೆ ಹೇಳುವುದು?

(ಗೊಂದಲ)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ : ಸುಪ್ರೀಂ ಕೋರ್ಟಿನಲ್ಲಿ ಯಾವ ರೀತಿ Judgment ಆಗಿದೆ ಎನ್ನುವುದು ನಿಮಗೂ ಗೊತ್ತಿದೆ ಸಿದ್ದರಾಮಯ್ಯ ನವರೆ,

(ಗೊಂದಲ)

ಶ್ರೀ ವೈ.ಎನ್.ರುದ್ರೇಶ್ ಗೌಡ : ಮಾನ್ಯ ಅಧ್ಯಕ್ಷರೆ---

(ಗೊಂದಲ)

ಅಧ್ಯಕ್ಷರು : ರುದ್ರೇಶ್‌ಗೌಡರೇತಾವು ಕುಳಿತುಕೊಳ್ಳಿ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ : ಸಿದ್ಧಿ ಬುದ್ಧಿ ಎರಡನ್ನು ಇಟ್ಟುಕೊಂಡಿದ್ದೀರಿ. ಅವರಿಗೆ ಸ್ವಲ್ಪ ಹೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : Floor Leaders ಸಭೆಕರೆದಾಗ ನೀರು ಬಿಡಬಾರದೆಂದು ಬಹಳ ಸ್ಪಷ್ಟವಾಗಿ ಸರ್ಕಾರಕ್ಕೆ ಹೇಳಿದ್ದೇವೆ.

(ಗೊಂದಲ)

ಅಧ್ಯಕ್ಷರು : ನಿಮಗೆ ಹೇಳಿದ್ದಲ್ಲ, ಕುಳಿತುಕೊಳ್ಳಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಒಳ್ಳೆ ಕಥೆಯಾಯಿತಲ್ಲ ಇದು. ಮಾತನಾಡುವುದಕ್ಕೆ 5–10 ನಿಮಿಷ ಲೇಟ್ ಮಾಡುತ್ತೀರಿ, ಆಂ ಊಂ ಎಂದುಕೊಂಡು ಅದೇನು ಮಾತನಾಡುತ್ತೀರಿ?

(ಗೊಂದಲ)

ಅಧ್ಯಕ್ಷರು : ಮಾನ್ಯ ಶಂಕರಲಿಂಗೇಗೌಡರೇ Please ಕುಳಿತು ಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ.

ಶ್ರೀ ಸಿದ್ದರಾಮಯ್ಯ : ಇದೇನು ನಿಮ್ಮಿಂದ ಮಾತು ಕಲೀಬೇಕಾಯಿತಲ್ಲ, ಎಂತಾ ಪರಿಸ್ಥಿತಿ ಬಂದು ಬಿಟ್ಟಿತು ಕಣಯ್ಯ! ಶಂಕರಲಿಂಗೇಗೌಡರಿಂದ ಮಾತು ಕಲೀಬೇಕಾದಂತಹ ಪರಿಸ್ಥಿತಿ ಬಂತಲ್ಲಾ ! ಶಂಕರಲಿಂಗೇಗೌಡರೇ,please ಕುಳಿತು ಕೊಳ್ಳಿ. Please sit down ...

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಸಿದ್ದರಾಮಯ್ಯ ಎಂದು ಹೆಸರನ್ನು ಇಟ್ಟುಕೊಂಡಿದ್ದಾರೆ, ಆದರೆ ಸಿದ್ಧಿನೂ ಇಲ್ಲ, ಬುದ್ಧಿನ್ನೂ ಇಲ್ಲ, ರಾಮನೂ ಇಲ್ಲ.

(ಗೊಂದಲ)

ಶ್ರೀ ಆರ್. ನರೇಂದ್ರ : ಗಂಭೀರವಾದಂತಹ ವಿಚಾರವನ್ನು ಮಾತನಾಡುತ್ತಿದ್ದಾರೆ. ಸದನದಲ್ಲಿ ಈ ರೀತಿ ಮಾಡುವುದೂ ಸರಿಯಿಲ್ಲ. ಗಂಭೀರವಾದ ವಿಚಾರ ರೈತರೆಲ್ಲಾ ಸಾಯುತ್ತಿದ್ದಾರೆ. ಮಾತನಾಡುವುದಕ್ಕೆ ಬಿಡಿ. ಅವರು ಬಹಳ ಅಡಚಣೆ ಮಾಡುತ್ತಿದ್ದಾರೆ. ಗಂಭೀರವಾಗಿ ಇವರೂ ಮಾತನಾಡುವುದಿಲ್ಲ, ಗಂಭೀರವಾಗಿ ಮಾತನಾಡುವುದಕ್ಕೂ ಅವಕಾಶಕೊಡುವುದಿಲ್ಲ.

(ಗೊಂದಲ)

ಅಧ್ಯಕ್ಷರು : Please ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಜವಾಬ್ದಾರಿಯುತವಾದ ಸ್ಥಾನಕ್ಕೆ ಹೋಗಿದ್ದೀರಿ. ಮೊದಲು ನಿಮ್ಮ ಜವಾಬ್ದಾರಿಯನ್ನು ತಿಳಿದುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಶಂಕರಲಿಂಗೇಗೌಡರೇ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರ್.ನರೇಂದ್ರ : ನಿಮಗೆ ಗಂಭೀರತೆ ಇಲ್ಲ ಎನಿಸುತ್ತದೆ.

(ಗೊಂದಲ)

ಅಧ್ಯಕ್ಷರು : Please, ಕುಳಿತುಕೊಳ್ಳಿ. ಮಾತನಾಡಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಶಂಕರಲಿಂಗೇಗೌಡರು . . . .

ಅಧ್ಯಕ್ಷರು : ಅವರ ಬಗ್ಗೆ ಹೇಳಲೇ ಬೇಡಿ. ತಾವು ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಹೇಳದೇ ಇರುವುದೇ ಒಳ್ಳೆಯದಲ್ಲವೇ? ತಾವು ಹೇಳಿದ ಮೇಲೆ ಆ ಕಡೆ ತಿರುಗೇ ನೋಡುವುದಿಲ್ಲ ಬಿಡಿ!

(ಗೊಂದಲ)

ಅಧ್ಯಕ್ಷರು : Please, ತಾವು ಕುಳಿತುಕೊಳ್ಳಿ. ಸೀರಿಯಸ್ ಆಗಿ ಮಾತನಾಡುತ್ತಿದ್ದಾರೆ. ನೀವು . . . .

ಶ್ರೀ ಸಿದ್ದರಾಮಯ್ಯ : ಈಗ ನನಗೆ ಅರ್ಥವಾಗದೇ ಇರುವುದು ಏನೆಂದರೆ, ತಮಿಳುನಾಡಿನವರಿಗೆ ನೀರಿದೆ. ಮೆಟ್ಟೂರು ಡ್ಯಾಂ ಹಾಗೂ ಭವಾನಿ ಎರಡು ಕಡೆಗಳಲ್ಲಿ ನೀರಿದೆ. ಅವರು 2.44 ಟಿ.ಎಂ.ಸಿ. ನೀರನ್ನು ಕೇಳುತ್ತಿರುವುದು ಏತಕ್ಕೆ? ಬೆಳೆಗೆ. ಸಾಂಬಾ ಬೆಳೆ ರಕ್ಷಣೆ ಮಾಡುವುದಕ್ಕೆ ಅವರ ಹತ್ತಿರ ನೀರು ಸಾಕಷ್ಟಿದೆ. ಮೆಟ್ಟೂರಿನಲ್ಲಿಯೂ ಇದೆ. ಭವಾನಿಯಲ್ಲಿಯೂ ಇದೆ.

ನಮ್ಮಲ್ಲಿ ಬೆಳೆಗಳಿಗೆ ನೀರು ಇಲ್ಲ. ನಮ್ಮ ಹತ್ತಿರ ಈ ವರ್ಷ ಬೇಸಿಗೆ ಬೆಳೆಗೆ ಒಂದೇ ಒಂದು ತೊಟ್ಟು ಬಿಡುವುದಕ್ಕೆ ನೀರಿಲ್ಲ. Standing crops ಅಂದರೆ ಕಬ್ಬು ಮತ್ತು ಇತರೆ ಬೆಳೆಗಳು ಒಣಗಿ ಹೋಗುತ್ತವೆ. ಅವುಗಳಿಗೆ ಬೆಂಕಿ ಹಾಕಬೇಕು. 12. ಟಿ.ಎಂ.ಸಿ. ನೀರು ಇದೆ ಇವರು ಹೇಳಿದ್ದಾರೆ. ಅದರಲ್ಲಿ 2 ಟಿ.ಎಂ.ಸಿ. ನೀರು evaporate ಆಗುತ್ತದೆ. ನಮಗೆ ಮುಂದಿನ ಜೂನ್‌ವರೆಗೆ ಜನರಿಗೆ ಕುಡಿಯಲು ನೀರು ಬೇಕು ದನಕರುಗಳಿಗೆ ಕುಡಿಯಲು ನೀರು ಬೇಕು ಹಕ್ಕಿ ಪಕ್ಷಿಗಳಿಗೆ ಕುಡಿಯಲು ನೀರು ಬೇಕು. ಬೆಂಗಳೂರಿನ ಜನರಿಗೆ ಒಂದು ತಿಂಗಳಿಗೆ ಒಂದೂವರೆ ಟಿ.ಎಮ್.ಸಿ. ನೀರು ಬೇಕು. ಬೆಂಗಳೂರಿನಲ್ಲಿರತಕ್ಕ ಎಲ್ಲಾ ಜನರಿಗಲ್ಲ, ಅದು ಭಾಗಶಃ ಜನರಿಗೆ ಕೊಡುವಂಥ ನೀರು. ಬೆಂಗಳೂರಿನ ಇಡೀ ಒಂದು ಕೋಟಿ ಜನರಿಗೆ ನೀರು ಕೊಡುವುದಾದರೆ ಇನ್ನೂ ಜಾಸ್ತಿಯಾಗುತ್ತದೆ. ಮಾರ್ಚ್–ಏಪ್ರಿಲ್‌ನಲ್ಲಿ

ಬೆಂಗಳೂರು ನಗರದಲ್ಲಿ, ಮೈಸೂರು ನಗರದಲ್ಲಿ ಎಲ್ಲಾ ಕಡೆ ಕುಡಿಯುವ ನೀರಿಗೆ ಬಹಳ ಹಾಹಾಕಾರ ಉಂಟಾಗುತ್ತದೆ. ನಮ್ಮಲ್ಲಿ ಕನಿಷ್ಠ ಪ್ರಮಾಣ 12 ಟಿ.ಎಮ್.ಸಿ. ನೀರು ಇದೆ. 45 ಪಟ್ಟಣಗಳಿಗೆ ಅಂದರೆ, ಬೆಂಗಳೂರು, ಮೈಸೂರು, ಇತರ ಪಟ್ಟಣಗಳಿಗೆ, ಹಳ್ಳಿಗಳಿಗೆ ಕುಡಿಯುವುದಕ್ಕೆ minimum 11.2 ಟಿ.ಎಮ್.ಸಿ. ನೀರು ಬೇಕು. ನಮ್ಮಲ್ಲಿ 10 ಟಿ.ಎಂ.ಸಿ. ಗಿಂತ ಕಡಿಮೆ ನೀರು ಇದೆ. ಎಲ್ಲಿಂದ ನೀರು ಕೊಡುವುದು? ನಮ್ಮನ್ನು ಮೊನ್ನೆ ಮುಖ್ಯಮಂತ್ರಿಗಳು ಕರೆದಾಗ ಯಾವ ಕಾರಣಕ್ಕೂ ನೀರು ಕೊಡಬೇಡಿ ಎಂದು ನಾವು ಹೇಳಿದ್ದೆವು. ನೀವೂ ಕೊಡುವುದಿಲ್ಲವೆಂದು ಹೇಳಿದ್ದೀರಿ. ಸ್ವಲ್ಪ ಧೈರ್ಯ ತೋರಿಸಿ. ಜನರಿಗೋಸ್ಕರ, ಕುಡಿಯುವ ನೀರಿಗೋಸ್ಕರ ಅಧಿಕಾರ ಬಿಡುವ ಪ್ರಸಂಗ ಬಂದರೆ ಅಧಿಕಾರ ಬಿಡಿ. ಯಾಕೆ ಅಧಿಕಾರಕ್ಕೆ ಅಂಟಿಕೊಂಡಿದ್ದೀರಿ? Contempt of court ಆಗುತ್ತದೆ ಎಂದು ನೀರು ಬಿಟ್ಟುಬಿಡುತ್ತೀರಿ. ಅಲ್ಲಿ ನಮ್ಮ ಲಾಯರುಗಳು ಯಾವ ರೀತಿ argument ಮಾಡುತ್ತಾರೋ ನನಗಂತೂ ಗೊಂತ್ತಿಲ್ಲ. ಸುಪ್ರೀಂಕೋರ್ಟ್‌ನವರು ಕೂಡ ತಮಿಳುನಾಡಿನವರ argument ಆಧಾರದ ಮೇಲೆಯೇ ಕೊಡುತ್ತಾರೆ. ಒಂದು ಕಮಿಟಿಯನ್ನು ಕಳುಹಿಸಿದ್ದರು. ಕಮಿಟಿಯವರು ಬೆಳೆಗೆ ಇಷ್ಟು ನೀರು ಬೇಕೆಂದು ಹೇಳಿದ್ದಾರೆ. Affidavit ಹಾಕಿ ಸುಪ್ರೀಂ ಕೋರ್ಟ್‌ಗೆ ಸುಳ್ಳು ಹೇಳಿದ್ದಾರೆ. ಅವರು ನಮಗೆ 12.ಟಿ.ಎಂ.ಸಿ. ನಿರು ಬೇಕೆಂದು ಹೇಳಿದರು. ಆಮೇಲೆ 9 ಟಿ.ಎಂ.ಸಿ. ನೀರು ಬೇಕೆಂದು ಹೇಳಿದರು. ಅದೆಲ್ಲಾ ಸುಳ್ಳು ಎಂದು ಕಮಿಟಿಯವರು ವರದಿ ಕೊಟ್ಟರು. ತಮಿಳುನಾಡಿನ ಲಾಯರು ಆ ಕಮಿಟಿಯ ವರದಿಯನ್ನೇ question ಮಾಡಿದರು. ಇದು ಸುಳ್ಳು ವರದಿ ಎಂದು ಹೇಳಿದರು. ಅವರಿಗೆ ಸುಪ್ರೀಂ ಕೋರ್ಟಿನವರು ಮಣೆ ಹಾಕುತ್ತಾರೆ. ಅವರ prayer ಅನ್ನು accept ಮಾಡಿಕೊಂಡು ನೀರು ಬಿಡುವುದಕ್ಕೆ ನಮಗೆ ಆದೇಶ ಮಾಡುತ್ತಾರೆ.ಅವರು ಸುಳ್ಳು ಹೇಳಿದ್ದರಲ್ಲಾ, ಅದನ್ನು consider ಮಾಡಿಲ್ಲ. Actually, ಇವರು ಸುಳ್ಳು ಹೇಳಿದ್ದಾರೆ ನೀವು ನೀರು ಬಿಡಬೇಡಿ ಎಂದು ಹೇಳಬೇಕಾಗಿತ್ತು. Affidavit ಹಾಕಿ ಸುಳ್ಳು ಹೇಳಿರುವ ತಮಿಳುನಾಡಿಗೆ ನೀರು ಕೊಡಿ ಎಂದು ಹೇಳಿದ್ದಾರೆ. ಅದಕ್ಕೆ ತಾವು ಒಪ್ಪಿಕೊಂಡು ನೀರು ಬಿಡುತ್ತಿದ್ದೀರಿ. ನಾವು ಬಹಳ ಸ್ಪಷ್ಟವಾಗಿ ಹೇಳಿದ್ದೆವು. ನೀರು ಬಿಡಬೇಡಿ, review petition ಹಾಕಿ, ಕೋರ್ಟ್‌ನವರಿಗೆ ground reality ಏನಿದೆ, ಈ

ರೀತಿ ಇದೆ ಎಂದು ಮನವರಿಕೆ ಮಾಡಿ, ಎಂದು ಮಾನ್ಯ ಎಸ್.ಆರ್.ಪಾಟೀಲ್, ಮಾನ್ಯ ನಾಣಯ್ಯನವರು ಮಾನ್ಯ ರೇವಣ್ಣ ನವರು, ಮಾನ್ಯ ಟಿ.ಬಿ. ಜಯಚಂದ್ರ ರವರು ಹೀಗೆ ನಾವೆಲ್ಲಾರೂ ಹೋಗಿ ಹೇಳಿದ್ದೆವು. ಆದರೂ ಇವರು ನೀರು ಬಿಟ್ಟಿದ್ದಾರೆ. ಮಾನ್ಯ ಬಸವರಾಜ ಬೊಮ್ಮಾಯಿಯ-ವರು ನೀರು ಬಿಡುವುದಿಲ್ಲವೆಂದರು. ಪತ್ರಿಕೆಗಳಿಗೂ ಹೇಳಿದರು. ರಾಜ್ಯದ ಜನತೆಯ ಹಿತವನ್ನು ಕಾಯುವುದಕ್ಕೆ ಆಗಲಿಲ್ಲವೆಂದ ಮೇಲೆ ರಾಜೀನಾಮೆಯಾದರೂ ಕೊಡಬೇಕು. ಇಲ್ಲವೆಂದರೆ ಕೋರ್ಟ್‌ನ ಆದೇಶವನ್ನು ಎದುರಿಸಲು ತಯಾರು ಆಗಬೇಕು. ಇವರಿಂದ ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ಆಗುವುದಿಲ್ಲ, ಜನರಿಗೆ ಕುಡಿಯುವ ನೀರು ಕೊಡುವುದಕ್ಕೆ ಆಗುವುದಿಲ್ಲ. ನೀವು ಸಂಪೂರ್ಣವಾಗಿ ಸೋತಿದ್ದೀರಿ. ನಿಮ್ಮ ಕೈಯಲ್ಲಿ ಇದು ಆಗುವುದಿಲ್ಲ. ಕೋರ್ಟ್‌ಗೆ ಹೋಗಿ review petition ಹಾಕಿ, ಒಂದು ತೊಟ್ಟು ನೀರು ಬಿಡಬೇಡಿ, ಅಲ್ಲಿ ಹೋಗಿ ಹೇಳಿ ಎಂದು ಹೇಳಿದರೂ, ಇಲ್ಲ ನಮ್ಮ ಲಾಯರು ನೀರು ಬಿಡುವುದಕ್ಕೆ ಹೇಳಿದ್ದಾರೆ. Comply ಮಾಡಬೇಡಿ. ನಾನು ಆ ಲಾಯರ್ ಇಷ್ಟು ವರ್ಷದಿಂದ ಇದ್ದಾರೆ, ಎಲ್ಲಾ ಖಾತೆಯಲ್ಲಿ ಇದ್ದರೆ, ಸಾಕು ಅವರನ್ನು ಬದಲಾಯಿಸಿ ಎಂದು ಹೇಳಿದ್ದೆ. ಮಾನ್ಯ ನಾರೀಮನ್ ಅವರು ಹೇಳಿದ್ದಾರೆ comply ಮಾಡಬೇಡಿ, ಆಮೇಲೆ ಸುಪ್ರೀಂ ಕೋರ್ಟ್‌ನಲ್ಲಿ review petition ಹಾಕಿ ಎಂದು. ನೀರು ಬಿಟ್ಟು ಎಲ್ಲಾ ನೀರು ಹೊರಟು ಹೋದ ಮೇಲೆ ಏನು ಮಾಡುವುದು? ಸುಪ್ರೀಂ ಕೋರ್ಟ್‌ನಲ್ಲಿ ಆಯಿತು ನೀರು ಬಿಟ್ಟಿದ್ದೀರಿ ಹೋಗಲಿ ಬಿಟ್ಟುಬಿಡಿ ಎಂದು ಹೇಳುತ್ತಾರೆ. I can't understand. ನಾವು legal battle ನಲ್ಲಿ ಸೋತಿದ್ದೇವೆಂದು ಬಹಳ ಸ್ಪಷ್ಟವಾಗಿ ಮನವರಿಕೆ ಆಗುತ್ತದೆ. ನೀವು ಈ ರಾಜ್ಯದ ಹಿತ ಕಾಪಾಡುವಲ್ಲಿ, ಕಾನೂನು ಹೋರಾಟದಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಿ ಎನ್ನತಕ್ಕಂಥ ಮಾತುಗಳನ್ನು ವಿಧಿಯಿಲ್ಲದೆ ಹೇಳಬೇಕಾಗಿದೆ. ಈ ರಾಜ್ಯದ ಜನರಿಗೆ ಅನ್ಯಾಯವ್ಯಾಗುತ್ತಿದೆ. ನಾವು ಅಲ್ಲಿ ತಿರುಗಾಡುವುದಕ್ಕೆ ಆಗಿಲ್ಲ. ನಾವು ಮಂಡ್ಯದ ಮೇಲೆ ಹೋಗಬೇಕು.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ : ಜನ ಕಲ್ಲಲ್ಲಿ ಹೊಡೆಯುತ್ತಾರೆ.

ಶ್ರೀ ಸಿದ್ದರಾಮಯ್ಯ : ಕಲ್ಲಿನಲ್ಲಿ ಹೊಡೆದರೆ ಪರವಾಗಿಲ್ಲ. ಬೇರೆ ರೀತಿಯಲ್ಲಿ ಹೊಡೆಯುತ್ತಾರೆ. ನೀವು ಬೇರೆ ಅದೇ ಊರಿನವರು. ಮೈಸೂರಿ–ನಲ್ಲಿ ರಾಜಕೀಯ ಮಾಡಿ ಇಲ್ಲಿ ಬಂದಿದ್ದೀರಿ.

ಶ್ರೀ ಹೆಚ್.ಎಸ್.ಶಂಕರಲಿಗೇಗೌಡ : ಆ ರೀತಿ ಏನೂ ಮಾಡುತ್ತಿಲ್ಲ ನಾವು. ನಿಮ್ಮಂಥ ನಾಯಕರು ಅಸಮರ್ಥರಾಗಿದ್ದೀರಲ್ಲ ಎಂದು ನನಗೆ ಯೋಜನೆ ಆಗಿದೆ. ನೀವು ಅಸಮರ್ಥರು.

ಶ್ರೀ ಸಿದ್ದರಾಮಯ್ಯ : ಮಾನ್ಯ ಶಂಕರಲಿಂಗೇಗೌಡರೆ, ನನ್ನಿಂದಲೇ ನೀವು ಇಲ್ಲಿ Assembly ಗೆ ಬಂದು ಕುಳಿತುಕೊಂಡಿದ್ದೀರಿ, ಗೊತ್ತಾ ನಿಮಗೆ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಆಯಿತು ಎಂದು ತಿಳಿದುಕೊಳ್ಳುತ್ತೇನೆ. ನಿಮ್ಮಿಂದ ಒಂದು ಓಟು ನನಗೆ ಬಿದ್ದಿದೆ. ವಿರೋಧ ಪಕ್ಷದಿಂದ ಓಟನ್ನು ಕೊಟ್ಟಿದ್ದೀರಿ.

ಶ್ರೀ ಸಿದ್ದರಾಮಯ್ಯ : Assembly ಗೆ ಬಂದಿರುವುದು ಯಾರಿಂದ ಹೇಳಪ್ಪ?

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ : ನೀವು ಜೆ.ಡಿ.ಎಸ್ ನಲ್ಲಿದ್ದು, ಕಾಂಗ್ರೆಸ್‌ಗೆ ಬಂದಿದ್ದೀರಿ. ಹಾಗೆ ನೀವು ನಿಂತಿದ್ದಾಗ ನಿಮಗೆ ನಾನೂ ಕೂಡ ಓಟು ಕೊಟ್ಟು ನಮ್ಮ ಕೋಳಿ ಫಾರಂನಲ್ಲಿ ಊಟ ಹಾಕಿ Assembly ಗೆ ಕಳುಹಿಸಿದ್ದೇನೆ. ಕೋಳಿ ಫಾರಂನಲ್ಲಿ ಮರಿ ಹಾಕಿ ಗೂಡು ಕಟ್ಟಿ Assembly ಗೆ ಕಳುಹಿಸಿದ್ದು ನಾನು!

(ಗೊಂದಲ)

ಅಧ್ಯಕ್ಷರು : ವಿಷಯಾಂತರ ಆಗುವುದು ಬೇಡ. ಗಂಭೀರವಾಗಿ ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ಶಂಕರಲಿಂಗೇಗೌಡರೆ, ಈ ರೀತಿ ಮಾತನಾಡಿದರೆ ಮುಂದೆ ತೊಂದರೆ ಆಗುತ್ತದೆ. ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದ ವಿಷಯ. ನಿನ್ನೆ ಮಂಡ್ಯಕ್ಕೆ ಹೋಗಿದ್ದೆ. ಜನ ನಮ್ಮನ್ನು ತಡೆಯುತ್ತಾರೆ. ಕದ್ದು ಬರಬೇಕದರೆ ರಾತ್ರಿ ಆಯಿತು. ಮೈಸೂರಿಗೆ ಹೋಗಿ ಬರಬೇಕಾದರೆ ಕದ್ದು ಬರಬೇಕಾಯಿತು. ಇದು ಬಹಳ ಕಷ್ಟದ ಪರಿಸ್ಥಿತಿ ಆಗಿದೆ. ಮಾರ್ಚ್, ಏಪ್ರಿಲ್, ಮೇ ತಿಂಗಳಿನಲ್ಲಿ ನೀರಿಗೆ ದೊಡ್ಡ ಹಾಹಾಕಾರ ಆಗುತ್ತದೆ. ಅದೂ ಎಲೆಕ್ಷನ್ ಟೈಮ್. ಇವರು ಸೋತು ಮನೆಗೆ

ಹೋಗುತ್ತಾರೆ. ನಾವು ಸಿಕ್ಕಿ ಹಾಕಿಕೊಳ್ಳುತ್ತೇವೆ. ಮಾನ್ಯ ಬಸವರಾಜು ರವರೆ, ತಾವು ಸೋಲುವುದು ಗ್ಯಾರಂಟಿ. ನಿಮ್ಮ ಆತ್ಮಾವಲೋಕನ ಮಾಡಿಕೊಳ್ಳಿ. ಈಗಲೇ ಸೋಲನ್ನು ಒಪ್ಪಿಕೊಂಡಿದ್ದೀರಿ. ಮಾನ್ಯ ರೇಣುಕಾಚಾರ್ಯರೆ, ಸೋಲುವುದಿಲ್ಲವೇ? ಎಲ್ಲರ ಮುಖಗಳನ್ನು ನೋಡಿದರೆ ಗೊತ್ತಾಗು-ವುದಿಲ್ಲವೇ ?

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಸೋಲುವುದು, ಗೆಲ್ಲುವುದು ಆಮೇಲೆ ತೀರ್ಮಾನ ಮಾಡುತ್ತಾರೆ. ಕಾವೇರಿ ನೀರನ್ನು ಇದೇ ರೀತಿ ಬಿಡುತ್ತಿದ್ದರೆ ಜನ ಇಬ್ಬರನ್ನೂ ಮನೆಗೆ ಕಳುಹಿಸುತ್ತಾರೆ. ನಮಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. Serious ಆಗಿ ಮಾತನಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇವರ ಕೈಯಲ್ಲಿ ಆಗದೆ ಹೋದರೆ ಕುರ್ಚಿ ಖಾಲಿ ಮಾಡಲಿ. ಕುರ್ಚಿಯಲ್ಲಿ ಇದ್ದುಕೊಂಡು ಈ ರಾಜ್ಯದ ಜನತೆಗೆ ಅನ್ಯಾಯ ಮಾಡುವುದು ಸರಿಯಲ್ಲ. ಇದು ದೊಡ್ಡ ಅನ್ಯಾಯ. ನಮಗೆ ಬೆಳೆ ಬೇಡಪ್ಪ, ಕುಡಿಯುವ ನೀರು ಬೇಕೆಂದು ಹೇಳಿದರೆ, ಕೋರ್ಟ್‌ನವರನ್ನು ಒಪ್ಪಿಸುವುದಕ್ಕೆ ಆಗಲಿಲ್ಲವೆಂದ ಮೇಲೆ ನಾವು ಏನು ಮಾಡಬೇಕು?

ಶ್ರೀ ಎಂ.ಪಿ. ರೇಣುಕಾಚಾರ್ಯ : ಮಾನ್ಯ ಅಧ್ಯಕ್ಷರೆ, ಐದು ವರ್ಷ ಆಡಳಿತ ಮಾಡಲಿ ಎಂದು ಜನ ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿರುತ್ತಾರೆ. ಕುರ್ಚಿ ಖಾಲಿ ಮಾಡುವುದಕ್ಕಲ್ಲ!

ಅಧ್ಯಕ್ಷರು : ಮಾನ್ಯ ರೇಣುಕಾಚಾರ್ಯರವರೆ ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಏಕೆ ಯಡಿಯೂರಪ್ಪನವರನ್ನು ಬಿಟ್ಟು ಬಿಟ್ಟಿದ್ದೀರಾ? ಆಯಿತಪ್ಪಾ, ಬಿಟ್ಟು ಬಿಟ್ಟಿದ್ದೀರೇನ್ರಿ? ಯಡಿಯೂರಪ್ಪನವರನ್ನು ಹೊಗಳಿರುವ paper cutting ಗಳನ್ನೆಲ್ಲಾ ತರಿಸಲೆ? ಯಡಿಯೂರಪ್ಪನವರನ್ನು ಎಷ್ಟು ಹೊಗಳಿದ್ದೀರಿ ಎನ್ನುವುದನ್ನೆಲ್ಲಾ ತರಿಸಲೇ? ಸುಮ್ಮನೆ ಇದನ್ನೆಲ್ಲಾ ಮಾತನಾಡುವುದಕ್ಕೆ ಹೋಗಬಾರದು, ಕುಳಿತುಕೊಳ್ಳಿ.

ಅಧ್ಯಕ್ಷರು : Please, ಕುಳಿತುಕೊಳ್ಳಿ.

ಶ್ರೀ ಎಂ.ಪಿ.ರೇಣುಕಾಚಾರ್ಯ : ನೀವು ಯಾರ್‍ಯಾರನ್ನು ಹೊಗಳಿದ್ದೀರಿ ಎನ್ನುವುದು ನಮಗೂ ಗೊತ್ತಿದೆ.

ಶ್ರೀ ಸಿದ್ದರಾಮಯ್ಯ : ನಾನೇ ಹೊಗಳಿರುವುದು? ನನ್ನ ಜೀವನದಲ್ಲಿ ಒಬ್ಬರನ್ನೂ ಹೊಗಳಿಲ್ಲ. ಒಂದೇ ಒಂದು ಉದಾಹರಣೆ, ಒಬ್ಬರನ್ನು ಹೊಗಳಿರುವುದನ್ನು ತೋರಿಸಿಬಿಟ್ಟರೆ, ಇವತ್ತೇ ರಜಕೀಯ ಬಿಟ್ಟು ನಾನು ಹೋಗುತ್ತೇನೆ.

ಶ್ರೀ. ಎಂ.ಪಿ.ರೇಣುಕಾಚಾರ್ಯ : ನೀವು ಜೆ.ಡಿ.ಎಸ್.ನಲ್ಲಿದ್ದಾಗ. . . .

ಶ್ರೀ ಸಿದ್ದರಾಮಯ್ಯ : ಯಾವ ಜೆ.ಡಿ.ಎಸ್.ನಲ್ಲಿದ್ದರೂ ಕೂಡಾ ನಾನು ಹೊಗಳಿಲ್ಲ. ತೋರಿಸಪ್ಪಾ, ನಿನಗೆ ಒಂದು ವಾರ ಟೈಮ್ ಕೊಡುತ್ತೇನೆ, ಒಂದೇ ಒಂದು paper statement ತೋರಿಸು.

ಶ್ರೀ ಎಂ.ಪಿ.ರೇಣುಕಾಚಾರ್ಯ : ತೆಗೆದುಕೊಂಡು ಬಂದು ತೋರಿಸು-ತ್ತೇನೆ.

ಶ್ರೀ ಸಿದ್ದರಾಮಯ್ಯ : ತೆಗೆದುಕೊಂಡು ಬಂದು ತೋರಿಸಪ್ಪಾ. ಎಲ್ಲಾದರೂ ಒಂದು ಕಡೆ ನಾನು ಯಾರನ್ನಾದರೂ ಹೊಗಳಿರುವುದನ್ನು ತೋರಿಸಿದರೆ ಮನೆಗೆ ಹೋಗುತ್ತೇನೆ.

ಶ್ರೀ ಎಂ.ಪಿ.ರೇಣುಕಾರ್ಯ : ತೋರಿಸುತ್ತೇನೆ.

ಶ್ರೀ ಸಿದ್ದರಾಮಯ್ಯ : ನೀನು ಹೊಗಳಿರುವುದು ಒಂದು ಮಣದಷ್ಟು ಆಗುತ್ತದೆ.

ಶ್ರೀ ಎಂ.ಪಿ.ರೇಣುಕಾಚಾರ್ಯ : ಆಯಿತು, ತಂದು ತೋರಿಸುತ್ತೇನೆ.

ಅಧ್ಯಕ್ಷರು: ಇದೆಲ್ಲಾ ಬೇಡ ಬಿಡಿ.

ಶ್ರೀ ಸಿದ್ದರಾಮಯ್ಯ : ಯಡಿಯೂರಪ್ಪನವರನ್ನು ಬೈದಿರುವುದು, ಯಡಿಯೂರಪ್ಪನವರನ್ನು ಹೊಗಳಿರುವುದು, ಸದಾನಂದಗೌಡರನ್ನು ಬೈದಿರು-ವುದು, ಜಗದೀಶ್ ಶೆಟ್ಟರನ್ನು ಬೈದಿರುವುದು ಇವೆಲ್ಲಾ ತಂದು ತೋರಿಸಲೇ?

ಅಧ್ಯಕ್ಷರು : ಇದೆಲ್ಲಾ ಏಕೆ?

ಶ್ರೀ ಸಿದ್ದರಾಮಯ್ಯ : ಆದ್ದರಿಂದ, ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುತ್ತಿದ್ದೇನೆಂದರೆ, ನೀರನ್ನು ಬಿಡಬೇಡಿ ಎಂದು ಹೇಳಿದರೂ ಕೂಡಾ ಈಗ ನೀರನ್ನು ಬಿಟ್ಟುಬಿಟ್ಟಿದ್ದಾರೆ. ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ಸುಮ್ಮನೆ ನಾಮಕಾವಸ್ಥೆಗೆ ಕರೆಯುತ್ತಾರೆ. ನಾವು ನೀರು ಬಿಡಬೇಡಿ ಎಂದು

ಹೇಳುತ್ತೇವೆ. ನಾವು ಹೇಳಿ ಬಂದ ಮೇಲೆ ಇವರು ನೀರನ್ನು ಬಿಟ್ಟಿರುತ್ತಾರೆ. ಇದು ಈ ರಾಜ್ಯದ ಜನರಿಗೆ ಮಾಡುತ್ತಿರುವಂಥ ಒಂದು ದೊಡ್ಡ ದ್ರೋಹ. ಕಾವೇರಿ ಜಲಾನಯನ ಪ್ರದೇಶದ ಜನರಿಗೆ, ಬೆಂಗಳೂರು ನಗರದ ಜನರಿಗೆ, ಕುಡಿಯುವ ನೀರಿಗೆ ಯಾರ್‍ಯಾರು ಕಾವೇರಿ ನೀರಿನ ಮೇಲೆ ಅವಲಂಬನೆಯಾಗಿದ್ದಾರೆ ಅ ಎಲ್ಲಾ ಜನರಿಗೂ ಮಾಡಿರುವಂಥ ದ್ರೋಹ. ಆದ್ದರಿಂದ ಈ ಸಕಾರದಿಂದ ರಾಜ್ಯದ ಜನರ ಹಿತ ಕಾಪಾಡುವುದಕ್ಕೆ ಸಾಧ್ಯವಿಲ್ಲ. ಇದು ಸರ್ಕಾರದ ಬೇಜವಾಬ್ದಾರಿತನ, ಇದು ಜನರಿಗೆ ಮಾಡಿರುವಂಥ ದ್ರೋಹ. ಇದನ್ನು ಖಂಡಿಸಿ ನಾನು ಮತ್ತು ನಮ್ಮ ಪಕ್ಷದವರು walk out ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಸದನದಿಂದ ಹೊರನಡೆದರು)

(ಗೊಂದಲ)

ಅಧ್ಯಕ್ಷರು : ಈಗ ನಾನು ಬಾಲಕೃಷ್ಣರವರನ್ನು ಕರೆದಿದೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ) : ಸನ್ಮಾನ್ಯ ಅಧ್ಯಕ್ಷರೆ, ಕಾವೇರಿ ವಿಚಾರದಲ್ಲಿ ಕಾಂಗ್ರೆಸ್ ಮತ್ತು ಬಿ.ಜೆ.ಪಿ. ಪಕ್ಷಗಳ ಧೋರಣೆ ಯಾವ ರೀತಿ ಇದೆಯೆಂದರೆ ಕಾಂಗ್ರೆಸ್ ಪಕ್ಷದವರು ಹೊಡೆದಂತೆ ಮಾಡುತ್ತಾರೆ, ಬಿಜೆಪಿ ಪಕ್ಷದವರು ಅತ್ತಂತೆ ಮಾಡುತ್ತಾರೆ. ಇವರು ಸರ್ವ ಪಕ್ಷಗಳ ಸಭೆ ಕರೆದಾಗ ಏನು ತೀರ್ಮಾನ ಮಾಡಿದ್ದಾರೋ ನನಗಂತೂ ಗೊತ್ತಿಲ್ಲ. ಆದರೆ ನಾನು ಮಾಧ್ಯಮಗಳಲ್ಲಿ, ಯಾವುದೇ ಕಾರಣಕ್ಕೂ ನೀರು ಬಿಡುವುದಿಲ್ಲ ಸುಪ್ರೀಂ ಕೋರ್ಟ್‌ನಲ್ಲಿ ಪುನರ್ ಪರಿಶೀಲನಾ ಅರ್ಜಿ ಹಾಕುತ್ತೇವೆ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ನೀರಾವರಿ ಸಚಿವರು ಹೇಳಿರುವುದನ್ನು ನೋಡಿದ್ದೇನೆ. ಈಗ ಅವರು ಇಲ್ಲಿ ಒಂದು ಸ್ಪಷ್ಟವಾದ ಉತ್ತರವನ್ನು, ಹೇಳಿಕೆಯನ್ನು ಕೊಟ್ಟರು. ನಾವು ಸುಪ್ರೀಂ ಕೋರ್ಟಿನಲ್ಲಿ ಪುನರ್ ಪರಿಶೀಲನಾ ಅರ್ಜಿ ಹಾಕಬೇಕಾದರೆ, ಸ್ವಲ್ಪವಾದರೂ ನೀರು ಬಿಡಬೇಕೆನ್ನುವುದನ್ನು ಸೂಕ್ಷ್ಮವಾಗಿ ನಮ್ಮ ಗಮನಕ್ಕೆ ತಂದಿದ್ದಾರೆ. ಈಗ ಇಲ್ಲಿ ಏನಾಗಿದೆಯೆಂದರೆ ಇದುವರೆವಿಗೂ ಈ ರಾಜ್ಯದಲ್ಲಿ ಎಲ್ಲೋ ಒಂದು ಕಡೆ ಸರ್ಕಾರಗಳು ನಮ್ಮನ್ನು ಉದಾಸೀನ ಮಾಡುತ್ತಿದ್ದಾರೆ, ನಮಗೆ ಬೇಕಾದಂಥ ಸವಲತ್ತುಗಳನ್ನು ಕೊಡುತ್ತಿಲ್ಲವೆನ್ನುವ ಕೂಗು ಉತ್ತರ ಕರ್ನಾಟಕದ ಕಡೆ ಇತ್ತು.

ಆದರೆ ಈಗ ಉತ್ತರ ಕರ್ನಾಟಕಕ್ಕೆ ಸಾಕಷ್ಟು ಸೌಲಭ್ಯಗಳನ್ನು ಕೊಡುವಂಥದ್ದನ್ನು, ಅದರಲ್ಲೂ ನೀರಾವರಿ ವಿಚಾರದಲ್ಲಿ ಹೆಚ್ಚೆಚ್ಚು ಸೌಲಭ್ಯಗಳನ್ನು ಕೊಡುತ್ತಿರುವುದನ್ನು ಈಗಾಗಲೇ ಬಜೆಟ್‌ನಲ್ಲಿ ಮಂಡನೆ ಮಾಡಿದ್ದಾರೆ. ಅನೇಕ ವರ್ಷಗಳಿಂದ, ಸನ್ಮಾನ್ಯ ದೇವೇಗೌಡರವರ ಕಾಲದಿಂದ ಅನೇಕ ಮುಖ್ಯ ಮಂತ್ರಿಗಳಿಂದ ಹಿಡಿದು ಉತ್ತರ ಕರ್ನಾಟಕಕ್ಕೆ ಸಾಕಷ್ಟು ಅನುಕೂಲಗಳನ್ನು ಮಾಡಿದ್ದರೆ. ಆದರೆ ಅವರಿಗೆ ಕೊಟ್ಟಿರುವುದಕ್ಕೆ ನಾವೇನೂ ಆಕ್ಷೇಪ ಮಾಡುತ್ತಿಲ್ಲ. ಅವರಿಗೆ ಸಲ್ಲಬೇಕಾದಂಥ ಹಕ್ಕು ಅವರಿಗೆ ಸಿಕ್ಕಿದೆ. ಆದರೆ ನಮಗೆ, ನಮ್ಮ ದಕ್ಷಿಣ ಕರ್ನಾಟಕದವರಿಗೆ, ಹಳೇ ಮೈಸೂರು ಪ್ರಾಂತ್ಯದವರಿಗೆ ಇವತ್ತು ಸ್ಪಷ್ಟವಾಗಿ ಅನ್ಯಾಯವಾಗುತ್ತಿರುವಂಥ ವಾತಾವರಣ-ವನ್ನು ನೋಡುತ್ತಿದ್ದೇವೆ. ಬಹುಶ: ಇಂಥ ಒಂದು ಪರಿಸ್ಥಿತಿ ಉತ್ತರ ಕರ್ನಾಟಕದಲ್ಲಿ ನಿರ್ಮಾಣವಾಗಿದ್ದರೆ ಯಾವುದೇ ಒಬ್ಬ ಲೋಕಸಭಾ ಸದಸ್ಯರನ್ನು, ಒಬ್ಬ ಲೋಕಸಭಾ ಕೇಂದ್ರದ ಮಂತ್ರಿಗಳನ್ನು ಅಥವಾ ಶಾಸಕರುಗಳನ್ನು ಓಡಾಡುವುದಕ್ಕೆ ಬಿಡುತ್ತಿರಲಿಲ್ಲ. ಆದರೆ ಇಲ್ಲಿ ದಕ್ಷಿಣ ಕರ್ನಾಟಕದಲ್ಲಿ, ಹಳೇ ಮೈಸೂರು ಭಾಗದಲ್ಲಿ ಎಲ್ಲೋ ಒಂದು ಕಡೆ ನಾವು ಷಂಡರಾಗಿದ್ದೇವೆಂಬ ಭಾವನೆ ಬರುತ್ತಿದೆ. ಇಷ್ಟೊಂದು ನಿರಂತರವಾದಂಥ ಅನ್ಯಾಯ, ಅದು ಕೇಂದ್ರ ಸರ್ಕಾರದಿಂದ ಇರಬಹುದು, ಸುಪ್ರೀಂ ಕೋರ್ಟಿನಿಂದ ಇರಬಹುದು, ಆಗುತ್ತಿದ್ದರೂ ಕೂಡಾ ನಮಲ್ಲಿ ಹೋರಾಟದ ಮನೋಭಾವನೆಯನ್ನು, ಹೋರಾಟದ ಕಿಚ್ಚನ್ನು ಎಲ್ಲೋ ಒಂದು ಕಡೆ ನಾವು ಕಳೆದುಕೊಂಡಿದ್ದೇವೆ. ಅಂಥ ಒಂದು ಭಾವನೆಯನ್ನು ಇವತ್ತು ನಾವೇ ವ್ಯಕ್ತಪಡಿಸುತ್ತಿದ್ದೇವೆ. ಇದು ಬಹಳ ಶೋಚನೀಯವಾದಂಥ ಸ್ಥಿತಿ. ಬಹುಶ: ಇವತ್ತು ಸಿದ್ದರಾಮಯ್ಯನವರು ಮಾತನಾಡುತ್ತಿದ್ದಂಥ ಸಂದರ್ಭದಲ್ಲಿ ಬಹಳ ಚೆನ್ನಾಗಿ ಹೇಳಿ ಹೋದರು. ಅವರೂ ಸಹ ನಾನು ವಿರೋಧ ಪಕ್ಷದ ನಾಯಕನಾಗಿ ಹಳೇ ಮೈಸೂರು ಭಾಗಕ್ಕೆ ನಿಜವಾದಂಥ ನ್ಯಾಯವನ್ನು ಒದಗಿಸುತ್ತಿದ್ದೇನೆಯೇ ಅಥವಾ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದಿದ್ದೇನೆಯೇ ಎಂದು ಹೇಳಿ ಆತ್ಮಾವಲೋಕನ ಮಾಡಿಕೊಳ್ಳಲಿ. ಅವರು ಸದನದೊಳಗಡೆ ಇರಬೇಕಾಗಿತ್ತು ನಾನು ಅವರನ್ನು ಕೇಳುತ್ತಿದ್ದೆ. ಕೇವಲ ಇವರು ಹೊಡೆದಂತೆ ಮಾಡುವುದು, ಅವರು ಅತ್ತಂತೆ ಮಾಡುವುದು. ಇಂಥ ಪರಿಸ್ಥಿತಿಯಿಂದ ಏನೂ ಪ್ರಯೋಜನ ಆಗುವುದಿಲ್ಲ. ನಿಜವಾದಂಥ

ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದ ನಾವು ಈ ದಕ್ಷಿಣ ಕರ್ನಾಟಕವನ್ನು, ಹಳೆ ಮೈಸೂರು ಭಾಗವನ್ನು ಎದುರಿಸುತ್ತಿದ್ದೇವೆ. ಇವತ್ತು ಕೇಂದ್ರದಲ್ಲಿ ಇಬ್ಬರು ಮಂತ್ರಿಗಳಿದ್ದಾರೆ. ಒಬ್ಬರು ಮಾನ್ಯ ವೀರಪ್ಪ ಮೊಯಿಲಿ, ಬಹುಶಃ ಕರಾವಳಿ ಪ್ರದೇಶದಿಂದ ಬಂದು ಈ ಭಾಗದ ಜನ ಗೆಲ್ಲಿಸಿ ಕಳುಹಿಸಿದ್ದಾರೆ. ಮತ್ತೊಬ್ಬರು ಸನ್ಮಾನ್ಯ ಮುನಿಯಪ್ಪನವರು, ರೈಲ್ವೆ ಸಚಿವರು ಇವರಿಬ್ಬರೂ ಕೂಡ ಇದುವರೆವಿಗೂ ಕಾವೇರಿ ನೀರಿನ ವಿಚಾರದಲ್ಲಿ ಚಕಾರ ಎತ್ತಿಲ್ಲ. ಇವತ್ತು ಸನ್ಮಾನ್ಯ ದೇವೇಗೌಡರವರು ದಿನನಿತ್ಯ ಮಾಧ್ಯಮಗಳಲ್ಲಿ ಹೇಳುವಂಥದ್ದು, ಮುಖ್ಯಮಂತ್ರಿಗಳನ್ನು ಭೇಟಿ ಮಾಡುವಂಥದ್ದು, ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುತ್ತಿರುವಂಥದ್ದು, ಒತ್ತಡವನ್ನು ತರುತ್ತಿರುವುದು ಈ ವಿಚಾರದಲ್ಲಿ ದಿನನಿತ್ಯ ಮಾಡುತ್ತಿದ್ದಾರೆ. ಕೇಂದ್ರದ ಮತ್ತೊಬ್ಬ ಮಂತ್ರಿಗಳಾದ ರೆಹಮಾನ್ ಖಾನ್‌ರವರು ಇದ್ದಾರೆ. ಬಹುಶಃ ಈ ಇಚ್ಛಾಶಕ್ತಿ ಕೊರತೆಯಿಂದ ನಮ್ಮ ದಕ್ಷಿಣ ಹಳೆ ಮೈಸೂರು ಭಾಗಕ್ಕೆ ಬಹಳ ಅನ್ಯಾಯವಾಗುತ್ತಿದೆ. ದಯಮಾಡಿ, ಈ ಸರ್ಕಾರ ಕೇವಲ ಅತ್ತಂತೆ ಮಾಡಬೇಡಿ, ಅವರೇನೋ ಹೊಡೆದಂತೆ ಮಾಡುವುದು, ಅವರೇನೋ ಹೊರಗಡೆ ಹೋಗುವುದು. ಏನೋ ಬೇಳೆ ಬೇಯಿಸಿಕೊಳ್ಳುವುದು. ನಿಮ್ಮನ್ನು ಸೋಲಿಸ್ತಾರೆ, ಅವರನ್ನು ಗೆಲ್ಲಿಸ್ತಾರೆ ಅನ್ನುವುದು ಇದೆಲ್ಲಾ ಬೇಡ. ಜನ ಯಾರನ್ನೂ ಗೆಲ್ಲಿಸುವುದಿಲ್ಲ. ಚುನಾವಣೆಗೆ ಹೋದರೆ ಜನ ನಮಗೆ ಚಪ್ಪಲಿ ತೆಗೆದುಕೊಂಡು ಹೊಡೆಯುತ್ತಾರೆ. ಅಂಥ ಒಂದು ಪರಿಸ್ಥಿತಿ ಇವತ್ತು ನಿರ್ಮಾಣವಾಗುತ್ತಿಟ. ಬಹಳ ನೋವಿನಿಂದ ಈ ಮಾತನ್ನು ಹೇಳಬೇಕಾದಂಥ ಸ್ಥಿತಿಗೆ ಇವತ್ತು ನಾವು ಬಂದಿದ್ದೇವೆ. ಬಹುಶಃ ಇನ್ನೊಂದು 25 ವರ್ಷ ಹೋದರೆ ಈ ಹಳೇ ಮೈಸೂರಿನ ಭಾಗದ ಜನ ಕುಡಿಯುವ ನೀರಿಗೋಸ್ಕರ ಪ್ರಾಣವನ್ನು ಕಳೆದುಕೊಳ್ಳುವಂಥ ಪರಿಸ್ಥಿತಿಗೆ ತಲುಪುತ್ತೇವೆ. ಆದ್ದರಿಂದ ದಯಮಾಡಿ ಸರ್ಕಾರ ನಮಗೆ ನ್ಯಾಯವನ್ನು ಒದಗಿಸಿ ಕೊಡಬೇಕು. ಇಲ್ಲದೇ ಹೋದರೆ ಈ ಸದನದ ಒಳಗಡೆ ಹೋರಾಟ ಮಾಡುವಂಥದ್ದಲ್ಲಿ, ಹೊರಗಡೆ ಜನರ ಉಗ್ರವಾದ ಹೋರಟವನ್ನು ಈ ಸರ್ಕಾರಗಳು ಎದುರಿಸಬೇಕಾಗುತ್ತದೆ ಎನ್ನುವಂಥ ಮಾತನ್ನು ಹೇಳಿ, ನೀವು ಸರ್ವ ಪಕ್ಷದ ಸಭೆಯಲ್ಲಿ ಏನು ಮಾತನಾಡಿದ್ದೀರೋ ನಮಗೆ ಗೊತ್ತಿಲ್ಲ. ನೀವು ನೀರು ಬಿಡುವುದಿಲ್ಲವೆಂದು ಹೇಳಿದ್ದಿರಿ, ಆದರೂ ನೀರು ಬಿಟ್ಟಿದ್ದೀರಿ. ನೋಡೋಣ, ಏನು ನೇಣಿಗೆ ಹಾಕಿ

ಬಿಡುತ್ತಾರಾ? ನಿಮ್ಮ ಜೊತೆಯಲ್ಲಿ ನಾವು ಬರುತ್ತೇವೆ. ಹಳೇಮೈಸೂರಿನ ಭಾಗದ ಜನ ನಾವು ನಿಮ್ಮ ಜೊತೆಗೆ ಇರುತ್ತೇವೆ. ಅವರು ನೇಣಿಗೆ ಹಾಕಲಿ. ನಾವೂ ನೇಣಿಗೆ ಸಿದ್ಧರಿದ್ದೇವೆ. ನಿಮ್ಮ ಜೊತೆ ಜೈಲಿಗೆ ಬರುವುದಕ್ಕೆ ಸಿದ್ಧರಿದ್ದೇವೆ. ಏತಕ್ಕೋಸ್ಕರ ನೀವು ತಲೆ ಬಾಗುತ್ತೀರಿ? ಕೇಂದ್ರ ಸರ್ಕಾರದವರು ನಿರಂತರವಾಗಿ ದಾವೆಯನ್ನು ಹೂಡಿ ಅವರ ಸರ್ಕಾರವನ್ನು ಉಳಿಸಿಕೊಳ್ಳು-ವುದಕ್ಕೋಸ್ಕರ ನಮಗೆ ಅನ್ಯಾಯವನ್ನು ಮಾಡುತ್ತಿದ್ದಾರೆ. ದಯಮಾಡಿ, ಇದನ್ನು ಪರಿಗಣಿಸಿ, ಯಾವುದೇ ಕರಣಕ್ಕೂ ನೀರನ್ನು ಬಿಡಬೇಡಿ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಿ ನೀವು ನೀರನ್ನು ಬಿಟ್ಟಿರುವ ವಿಚಾರವಾಗಿ ನಾವೂ ಕೂಡಾ ನಮ್ಮ ಪಕ್ಷದ ವತಿಯಿಂದ ಸಭಾತ್ಯಾಗವನ್ನು ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಜೆ.ಡಿ (ಎಸ್) ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಾ ಸಭಾತ್ಯಾಗ ಮಾಡಿದರು)

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೆ, ಈ ಕಾವೇರಿಗೆ ಬಹಳ ದೊಡ್ಡ ಇತಿಹಾಸವಿದೆ. ಕಾಂಗ್ರೆಸ್‌ನವರು ಮತ್ತು ಜೆಡಿಎಸ್‌ನವರು ಈಗ ಏನು ಪರಾಕ್ರಮ ತೋರಿಸುತ್ತಿದ್ದಾರಲ್ಲಾ, ಇವರ ಆಡಳಿತಾವಧಿ ಇದ್ದಾಗ ಕದ್ದು ಮುಚ್ಚಿ ನೀರು ಬಿಟ್ಟಿರುವಂಥ ಇತಿಹಾಸವಿದೆ. ಇದೇನು ಪ್ರಥಮ ಬಾರಿಗೆ ಈ ಆದೇಶ ಬಂದಿಲ್ಲ. ಹಿಂದೆಯೂ ಕೂಡ ಆದೇಶವಾಗಿದೆ. ಇವರು ಆಡಳಿತ ಪಕ್ಷದಲ್ಲಿದ್ದಾಗ ಕಾನೂನಿನ ವಿರುದ್ಧವಾಗಿ ನಡೆದುಕೊಂಡು ಬೇಜವಾಬ್ದರಿ ಕಾರಣದಿಂದ interim order ಬಂತು. Interim order notify ಆಯಿತು. ಅದೇ ಇವತ್ತು ಮರಣ ಶಾಸನ. ನಿಜವಾದ ಮರಣ ಶಾಸನ ಈ interim order ಆ interim order ಪ್ರಕಾರ ಇವತ್ತು ಸುಪ್ರೀಂ ಕೋರ್ಟ್ ಆದೇಶ ಮಾಡುತ್ತಿದೆ. ಇದೇನು ಬಿ.ಜೆ.ಪಿ. ಬಂದ ಮೇಲೆ ಹುಟ್ಟು ಹಾಕಿದ್ದೇ? ಬಿ.ಜೆ.ಪಿ. ಬಂದ ಮೇಲೆ ನ್ಯಾಯಾಂಗಕ್ಕೆ ಹೋಗಿದ್ದೇವೆಯೇ? ಬಿ.ಜೆ.ಪಿ. ಬಂದ ಮೇಲಷ್ಟೇ ಆದೇಶ ಬಂದಿದೆಯೆ? ಬಿ.ಜೆ.ಪಿ.ಯವರಷ್ಟೇ ನೀರನ್ನು ಬಿಟ್ಟಿದ್ದಾರಾ? ಹಿಂದೆ ಯಾವ ಯಾವ ಸಂದರ್ಭದಲ್ಲಿ ಯಾವಾಗ ನೀರು ಬಿಟ್ಟಿದ್ದಾರೆ ಎಂಬುದು ಗೊತ್ತಿದೆ. ಕೋರ್ಟ್ ಆದೇಶವಿಲ್ಲದೆ ನೀರು ಬಿಟ್ಟಿದ್ದಾರೆ. ಕೋರ್ಟ್ ಆದೇಶವಿದ್ದಾಗ ನೀರನ್ನು ಬಿಡದಿರುವ ಕಾರಣದಿಂದ ಸುಪ್ರೀಂ

ಕೋರ್ಟ್ ಎದುರುಗಡೆ ಕೈಕಟ್ಟಿಕೊಂಡು ನಿಂತಿದ್ದರು. ಕೈಕಟ್ಟಿಕೊಡು ಕ್ಷಮಾಪಣೆ ಕೇಳಿ ನೀರು ಬಿಟ್ಟಿದ್ದಾರೆ. ಆಗ ಒಬ್ಬ ರೈತ ಸತ್ತು ಹೋದ. ಆ ನೀರು ಬಿಟ್ಟಂಥ ಸಂದರ್ಭದಲ್ಲಿ ಇವರಿಗೆ ನಿಭಾಯಿಸುವುದಕ್ಕೆ ಆಗಲಿಲ್ಲ. ಇಂಥ ದರಿದ್ರ ಬಳುವಳಿ ನಮಗಿದೆ, ಇಂಥ ಕೆಟ್ಟ ಬಳುವಳಿ ನಮಗಿದೆ. ಆದರೂ ಕೂಡ ಸಂಯಮದಿಂದ ಒಂದು ಕಡೆ ಕಾನೂನನ್ನು ರಕ್ಷಣೆ ಮಾಡಬೇಕು, ರಾಜ್ಯದ ರೈತರ ಹಿತ ಕಾಪಾಡಬೇಕು. ಮಾನ್ಯ ಸಭಾಧ್ಯಕ್ಷರೆ, ಇಬ್ಬರೂ ಅಧಿಕಾರದಲ್ಲಿದ್ದಾಗ ರಾತ್ರಿ ಹೊತ್ತು ಕದ್ದು ಮುಚ್ಚಿ ನೀರು ಬಿಟ್ಟಿರಲಿಲ್ಲವೇ? ನಮ್ಮ ಬಗ್ಗೆ ಮಾತನಾಡುವುದಕ್ಕೆ ಇವರಿಗೆ ಯಾವ ನೈತಿಕ ಹಕ್ಕಿದೆ? ಕೆಲವು ವಿಚಾರಗಳನ್ನು ಇಲ್ಲಿ ಸದನದಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಅವತ್ತು ನೀರಾವರಿ ಪ್ರದೇಶ ಏನಿತ್ತು? ಇವತ್ತು ನೀರವರಿ ಪ್ರದೇಶ ಏನಿದೆ? ಅಂದಿನ ನೀರಿನ ಬಳಕೆ ಏನಿತ್ತು? ಇಂದಿನ ನೀರಿನ ಬಳಕೆ ಏನಿದೆ? ಅಂಥದ್ದರಲ್ಲಿ ನಾವು ಯಾವ ರೀತಿ ನಿಭಾಯಿಸಿದ್ದೇವೆ. ಇವತ್ತು ಬೀದಿಯಲ್ಲಿ ನಿಂತು ಹೋರಾಟ ಮಾಡುತ್ತಿರುವವರು ಯಾರು? ನಿಜವಾದ ರೈತರು ಏಕೆ ಇವತ್ತು ಬೀದಿಗಿಳಿದು ಹೋರಾಟ ಮಾಡುತ್ತಿಲ್ಲ? ಕಾವೇರಿ ನೀರಿನ ವಿಚಾರದಲ್ಲಿ ಇವರು ರಾಜಕಾರಣ ಮಾಡುವುದಕ್ಕೆ ಹೊರಟಿದ್ದಾರೆ. ಇದು ಈ ರಾಜ್ಯಕ್ಕೆ ಮಾಡುತ್ತಿರುವ ಅನ್ಯಾಯ. ಇದುವರೆವಿಗೂ ಯಾವುದೇ ಸರ್ಕಾರ, ಯಾವುದೇ ಪಕ್ಷ ನೀರಿನ ವಿಚಾರದಲ್ಲಿ ರಾಜಕರಣ ಮಾಡಿರಲಿಲ್ಲ.

ಕೃಷ್ಣಾ ಇರಬಹುದು, ಕಾವೇರಿ ಇರಬಹುದು. ಇವತ್ತು ರಾಜಕಾರಣ ತಂದಿದ್ದಾರೆ. ಸುಪ್ರೀಂ ಕೋರ್ಟ್ ಆದೇಶವನ್ನು ಒಕ್ಕೂಟ ವ್ಯವಸ್ಥೆಯಲ್ಲಿ ಯಾವ ರೀತಿ ನಿಭಾಯಿಸಬೇಕು? ಇದೊಂದು constitutionally framed Government ಇದೆ. ಆದಾಗ್ಯೂ ಕೂಡಾ ನಾವು ಆತುರದ ಕ್ರಮವನ್ನು ತೆಗೆದುಕೊಳ್ಳುವುದಿಲ್ಲವೆಂದು ಹೇಳಿದ್ದೆವು. ನಾವು ಯಾವುದೇ ರೀತಿಯ ಆತುರದ ಕ್ರಮವನ್ನು ತೆಗೆದುಕೊಡಿಲ್ಲ. ಸದನದಲ್ಲಿ ಏನು ಹೇಳಿದೆವು, ಅದೇ ರೀತಿ ನಡೆದುಕೊಡಿದ್ದೇವೆ. ನಮ್ಮ ಮಾತುಗಳೇನಿದೆ ರೆಕಾರ್ಡಿನಲ್ಲಿ ತೆಗೆಸಿ ನೋಡಿ. ಆತುರದ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಪುನರ್ ಪರಿಶೀಲನಾ ಅರ್ಜಿ ಹಾಕುವುದರಿಂದ ಹಿಡಿದು ಎಲ್ಲಾ ಕ್ರಮಗಳನ್ನು ನಮ್ಮ ವಕೀಲರ ಜೊತೆ ಚರ್ಚೆ ಮಾಡುತ್ತೇವೆಂದು ಹೇಳಿದ್ದೆವು. ಆ ರೀತಿ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಹಿರಿಯ ನ್ಯಾಯವಾದಿಗಳಾದ ನಾರಿಮನ್ ರವರು ಈ

O - 24 - F-51

ಕೇಸನ್ನು ಕಳೆದು 27–28 ವರ್ಷದಿಂದ ನಡೆಸುತ್ತಿದ್ದಾರೆ. ಬಹುತ್ತೇಕವಾಗಿ ಅವರಿಗೆ ಗೊತ್ತಿರುವಂತಹ ಹಿನ್ನೆಲೆ ಯಾರಿಗೂ ಕೂಡ ಗೊತ್ತಿಲ್ಲ. ಅವರು ಒಂದು ಸಲಹೆ ಕೊಟ್ಟರು. 'ನೀವು comply ಮಾಡಲು ಪ್ರಾರಂಭ ಮಾಡಿ, ನಮಗೆ ಕೇಸ್ ನಡೆಸಲು ಅನುಕೂಲವಾಗುತ್ತದೆ.' ಎಂದು. ಇವತ್ತಿಗೂ ಅವರು 'ನೀವು comply ಮಾಡಿದ್ದು ಬಹಳ ಕಡಿಮೆ ಇದೆ'. ಎಂಬ ಮಾತನ್ನು ಹೇಳುತ್ತಿದ್ದಾರೆ. ನಾನು ಸೂಕ್ಷ್ಮವಾಗಿ ಹೇಳಿದ್ದೇನೆ. ಸುಪ್ರೀಂ ಕೋರ್ಟಿನಲ್ಲಿ ಕೇಸ್ ಇರುವುದರಿಂದ ನಾನು ಬಹಿರಂಗವಾಗಿ ಹೇಳಲು ಆಗುವುದಿಲ್ಲ. ಸ್ವಾಮಿ 2 ಸಾವಿರ ಕ್ಯೂಸೆಕ್ಸ್ ನೀರನ್ನು ಬಿಟ್ಟಿದ್ದೇವೆ. ಎಲ್ಲಿದೆ ನೀರು?, ಎಲ್ಲಿ ತಲುಪಿದೆ?, ಯಾರು ಬಳಕೆ ಮಾಡುತ್ತಿದ್ದಾರೆ? ನನಗೆ ಇದೇ ಶಾಸಕರು 4 ದಿವಸದಿಂದ ಏನು ಹೇಳುತ್ತಿದ್ದರು? ನದಿಗೆ ನೀರು ಬಿಡಿ ಎಂದು ಹೇಳಿಲ್ಲವೇನು ಅವರಿಗೆ ಕೇಳಿ. ಕಾವೇರಿ ವಿಚಾರದಲ್ಲಿ ಹುಡುಗಾಟ ಮಾಡುತ್ತಿದ್ದಾರೇನು? ಕಾವೇರಿ ವಿಚಾರದಲ್ಲಿ ನಮಗಿರುವ ಬದ್ಧತೆ ಬೇರೆ. ಯಾವುದೇ ಹಿಂದಿನ ಸರ್ಕಾರಗಳೂ ಮಾಡಿಲ್ಲ. C.R.A ಆದೇಶವಿರಬಹುದು, ಸುಪ್ರೀಂ ಕೋರ್ಟ್ ಆದೇಶ ಇರಬಹುದು ಹಿಂದಿನ ಎಲ್ಲಾ ಸರ್ಕಾರಗಳ ಸಮಯದಲ್ಲಿ ತಮಿಳುನಾಡಿನ affidavit ಪ್ರಕಾರ ಎಲ್ಲಾ ಆದೇಶಗಳು ಬರುತ್ತಿತ್ತು. ಹಿಂದೆ ಯಾವುದೇ ಸಂದರ್ಭದಲ್ಲಿ ತಮಿಳುನಾಡಿನ affidavit ಸುಳ್ಳು ಎಂದು ಪುರಾವೆ ಮಾಡಲು ಆಗಿರಲಿಲ್ಲ. 1983 ರಲ್ಲಿ ಪ್ರಥಮವಾಗಿ ಪ್ರಾರಂಭವಾದ ಸಂದರ್ಭದಿಂದ ಇವತ್ತಿನವರೆಗೆ 30 ವರ್ಷಗಳಾಯಿತು. ತಮಿಳುನಾಡಿನ affidavit ಸುಳ್ಳು ಎಂದು prove ಮಾಡಲಾಗಿರಲಿಲ್ಲ. ನಾವು ಪ್ರಥಮ ಬಾರಿಗೆ ನಮ್ಮ ಸರ್ಕಾರ ಬಂದ ಮೇಲೆ ತಮಿಳುನಾಡಿಗೆ ನಮ್ಮ ಅಧಿಕಾರಿಗಳನ್ನು, ಕೃಷಿ ತಜ್ಞರನ್ನು ಕಳುಹಿಸಿ ತಮಿಳುನಾಡಿನವರು ಮಾಡಿರುವ claim ತಪ್ಪು 14 ಟಿ.ಎಂ.ಸಿ. claim ಮಾಡಿರುವ ಕಡೆ ಕೇವಲ 2.44 ಟಿ.ಎಂ.ಸಿ. ಎನ್ನುವುದನ್ನು ಜಲ ಆಯೋಗಕ್ಕೆ ಕೂಡಾ ಕಳುಹಿಸಿದ್ದು, ಅವರೂ ಕೂಡಾ ಒಪ್ಪಿದ್ದಾರೆ. ಪ್ರಥಮ ಬಾರಿಗೆ ತಮಿಳುನಾಡಿನ bogus affidavit ಇವತ್ತು expose ಆಗಿದೆ. ನಾವೇನು ಕೈ ಕಟ್ಟಿಕೊಂಡು ಸುಮ್ಮನೆ ಕುಳಿತಿದ್ದೇವೇನು? ನಮಗೆ ಬೇಜವಾಬ್ದಾರಿ ಏನು? ತಮಿಳುನಾಡಿನವರದು bogus affidavit ಎಂದು ಪುರಾವೆ ಮಾಡಿದವರು ಯಾರು? ನಮ್ಮ ಸರ್ಕಾರ, ನಮ್ಮ ವಕೀಲರಲ್ಲವೇನು? ಹಗುರವಾಗಿ ಮಾತನಾಡುವುದು ಬಹಳ

ಸುಲಭವಿದೆ. ರಾಜಕಾರಣ ಮಾಡುವ ಸಲುವಾಗಿ ಮಾತನಾಡಿದರೆ, ನಮಗೂ ಉತ್ತರ ಕೊಡುವುದು ಗೊತ್ತಿದೆ. ನಾವೂ ಜನರಿಂದ ಆಯ್ಕೆಯಾಗಿ ಬಂದಿದ್ದೇವೆ. ನಾವೂ ಎದುರಿಸಲು ಸಿದ್ಧರಿದ್ದೇವೆ. ಇಂತಹ ಬಹಳಷ್ಟು ಪ್ರಸಂಗಗಳು ನನಗೆ ಗೊತ್ತಿದೆ. ಇವರು ವಿರೋಧ ಪಕ್ಷದಲ್ಲಿದ್ದಾಗ ಒಂದು, ಆಡಳಿತ ಪಕ್ಷದಲ್ಲಿದ್ದಾಗ ಒಂದು. ಜನತೆಗೆ ಹೇಳುವುದಕ್ಕಾಗುವುದಿಲ್ಲವೇನು? Interim ಆದೇಶ ಬರುತ್ತಿದೆ. Interim ಆದೇಶ ಬರದಿದ್ದರೆ ಇವತ್ತು supreme court ಆದೇಶ ಬರುತ್ತಿರಲಿಲ್ಲ. Interim ಆದೇಶ ಬರುವುದಕ್ಕೆ ಯಾರು ಕಾರಣ? ಅದೇ ನಿಜವಾದ ಮರಣ ಶಾಸನ. 1924 ರ agreement, interim ಆದೇಶ. ಈ ಮರಣ ಶಾಸನ ಬರಲು ಯಾರು ಕಾರಣ? ಯಾರು ಜವಾಬ್ದಾರಿ? ರಾಜ್ಯದ ಜನತೆಗೆ ಇವರು ಹೇಳಬೇಕು. ಒಂದು ರೀತಿಯಲ್ಲಿ ಮರಣ ಶಾಸನ ಮಾಡಿ ಅದರ ನೇಲೆ ಆದೇಶ ಬಂದಾಗ ಕಾನೂನು ರೀತಿಯಲ್ಲಿ ನಡೆದುಕೊಳ್ಳಬೇಡಿ ಎಂದು ಹೇಳುತ್ತಾರೆ. ಇದೊಂದು ಜವಾಬ್ದಾರಿಯುತ ವಿರೋಧ ಪಕ್ಷವೇನು? ಈ ಸಂದರ್ಭದಲ್ಲಿ ನಾವೆಲ್ಲಾ ಒಗ್ಗಟ್ಟಾಗಿ ನಿಂತು ಯಾವ ರೀತಿ ನಿಭಾಯಿಸಬೇಕೆನ್ನುವ ಚಿಂತನೆ ಮಾಡಬೇಕಾಗುತ್ತದೆ. ನಾವು ರೈತರಿಗೆ ನೀರು ಬಿಡುವ ಕೊನೆಯ ದಿನದವರೆವಿಗೂ ನೀರನ್ನು ಬಿಟ್ಟಿದ್ದೇವೆ. ಯಾರಿಗೂ ಅನ್ಯಾಯ ಮಾಡಿಲ್ಲ. ಆದರೆ, ಒಂದು ಸ್ಥಿತಿ, ಸನ್ನಿವೇಶ ಅತ್ಯುನ್ನತ ಸುಪ್ರೀಂ ಕೋರ್ಟ್ ಆದೇಶ ಬಂದಾಗ ಏನು ಮಾಡಲು ಸಾಧ್ಯ? ನಾವು ಸ್ವಯಂ ಪ್ರೀತಿಯಿಂದ ಬಿಡುತ್ತಿದ್ದೇವೇನು? ನಮ್ಮ ವಕೀಲರುಗಳ ಆದೇಶದ ಮೇಲೆ ಬಿಡುತ್ತಿದ್ದೇವೇನು? ಹಿಂದೆಲ್ಲಾ ಬಿಟ್ಟಿದ್ದಾರೆ. ಈ ರೀತಿ ನಡೆದುಕೊಳ್ಳುವುದು ವಿರೋಧ ಪಕ್ಷದವರು ಜವಾಬ್ದಾರಿ ಏನು? ರಾಜ್ಯದ ಜನರು ಖಂಡಿತವಾಗಿಯೂ ನೋಡುತ್ತಿದ್ದಾರೆ. ಆದುದರಿಂದ ನನಗೆ ವಿಶ್ವಾಸವಿದೆ. ನಾವು ಹಲವಾರು ರೈತ ಪ್ರತಿನಿಧಿಗಳ ಜೊತೆಗೆ ಮಾತನಾಡಿದ್ದೇವೆ. ಅವರಿಗೆ ಗೊತ್ತಿದೆ. ಬೆಂಗಳೂರಿನಲ್ಲಿ ಕುಡಿಯುವ ನೀರಿನದು ಬಹಳ ದೊಡ್ಡ ಸವಾಲಿದೆ. ಕುಡಿಯುವ ನೀರಿನ 4ನೇ ಹಂತಕ್ಕೆ ಸುರೇಶ್ ಕುಮಾರ್ ರವರು ನೀರನ್ನು ತಂದಿದ್ದಾರೆ. ಅದಕ್ಕೂ ನೀರು ಕೊಡಬೇಕಾಗಿದೆ. ಅದನ್ನು ಯಾವ ರೀತಿ ನಿಭಾಯಿಸಬೇಕೆನ್ನುವ ಚಿಂತನೆ ನಮಗೆ ಇದೆ. ದೊಡ್ಡ storage ನಲ್ಲಿ ಯಾವ ರೀತಿ ಉಪಯೋಗ ಮಾಡಿಕೊಳ್ಳಬೇಕೆಂದು ಈಗಾಗಲೇ ಮುಂದಾಲೋಚನೆ–

ಯಿಂದ ಕ್ರಮ ಜರುಗಿಸಿದ್ದೇವೆ. ನಾವು ವಾರಕ್ಕೊಮ್ಮೆ ಸಭೆ ಮಾಡುತ್ತಿದ್ದೇವೆ. ಪ್ರತಿನಿತ್ಯ ಏನೇನಾಗುತ್ತಿದೆ, ಪ್ರತಿನಿತ್ಯ ಎಷ್ಟೆಷ್ಟು ನೀರು ಹೋಗುತ್ತಿದೆ, ಎಲ್ಲಿ ಉಳಿಸಬೇಕೆಂಬ ಚಿಂತನೆ ಮಾಡುತ್ತಿದ್ದೇವೆ. ಬೆಂಗಳೂರಿಗಾಗಿ Contingency Plan ತಯಾರು ಮಾಡುತ್ತಿದ್ದೇವೆ. ಎಲ್ಲಾ ರೀತಿಯ ಮುಂದಾಲೋಚನಾ ಕ್ರಮವನ್ನು ತೆಗೆದುಕೊಂಡಿದ್ದೇವೆ. ಇವರು ನೀರಿನಲ್ಲಿ ರಾಜಕಾರಣ ಮಾಡುತ್ತಾರೆ. ಇದು ಅಕ್ಷಮ್ಯ ಅಪರಾಧ. ಹಿಂದೆ ಇವರು ನೀರು ಬಿಟ್ಟಿಲ್ಲವೆಂದರೆ, ಇವರಿಗೆ ನೈತಿಕ ಹಕ್ಕು ಇದೆ. ಹಿಂದೆ ಎಲ್ಲಾ ಪ್ರಸಂಗಗಳಲ್ಲಿ ಎರಡೂ ಪಕ್ಷಗಳವರು ನೀರನ್ನು ಬಿಟ್ಟು ಈಗ ಪರಾಕ್ರಮದ ಮಾತುಗಳನ್ನು ಆಡಿದರೆ, ಮತ್ತೆ ಆಗ ಏಕೆ ಬಿಟ್ಟಿರಿ? ಆಗ ಜವಾಬ್ದಾರಿ ಇರಲಿಲ್ಲವೇನು? ಈ ಪರಾಕ್ರಮವನ್ನು ನೀವು ಆಡಳಿತದಲ್ಲಿದ್ದಾಗ ತೋರಿಸಬೇಕಿತ್ತು. ಮಾತನಾಡುವುದು ಬಹಳ ಸುಲಭವಿದೆ. ಮಾನ್ಯ ಸಭಾಧ್ಯಕ್ಷರೆ, ನಮ್ಮದು ಜವಾಬ್ದಾರಿಯುತ ಸರ್ಕಾರ, ಸಂವಿಧಾನಾತ್ಮಕ ಸರ್ಕಾರ. ನಮ್ಮ ರಾಜ್ಯದ ರೈತರ, ಸಾಮಾನ್ಯ ಜನರ ಹಿತರಕ್ಷಣೆ ಮಾಡಲು ಬದ್ಧರಿದ್ದೇವೆ. ಕಾನೂನಿನ ಹಾಗೂ ಸಂವಿಧಾನದ ಚೌಕಟ್ಟಿನಲ್ಲಿ ಕೆಲಸ ಮಾಡಲು ಸಿದ್ಧರಿದ್ದೇವೆ. ಮುಂದೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಆದುದರಿಂದ ಇಂದು ಅವರು ಏನು ಹೇಳಿದ್ದಾರೆ ಅದು ಸಂಪೂರ್ಣವಾಗಿ ಅಕ್ಷರಶಃ ಸುಳ್ಳು, ಬೇಜವಾಬ್ದಾರಿಯಿಂದ ಕೂಡಿದಂತಹುದು ಇದೆ. ಇದನ್ನು ಜನರು ಅರ್ಥ ಮಾಡಿಕೊಳ್ಳುತ್ತಾರೆ. ಜನರು ಸಹಕಾರ ಮಾಡುತ್ತಾರೆ. ಈ ಸಂಕಷ್ಟದಿಂದ ಹೊರಗೆ ಬರುತ್ತೇವೆ. Once for all ತಮಿಳುನಾಡಿನವರದು ಸುಳ್ಳು ಎಂದು ಆದ ಮೇಲೆ ಮುಂದಿನ ದಿನಗಳಲ್ಲಿ ಕಾವೇರಿ ವಿಚಾರದಲ್ಲಿ ಬಹಳ ದೊಡ್ಡ ತಿರುವು ಸಿಕ್ಕಿದೆ. It is an important turning point in the Cauvery dispute and this will lead further to future solution of Cauvery. ಆದುದರಿಂದ ನಮ್ಮ ವಕೀಲರು ಕೂಡಾ ಅತ್ಯಂತ ಪ್ರಾಮಾಣಿಕವಾಗಿ ಮಾಡುತ್ತಿದ್ದಾರೆ. ಅವರ ಅನುಭವದ ಮೇಲೆ ಕೆಲವು ಸಲಹೆ ಕೊಟ್ಟಿದ್ದಾರೆ. ಅವರ ಅನುಭವಕ್ಕೆ ನಾವು ಗೌರವ ಕೊಟ್ಟು ಆ ಕೆಲಸ ಮಾಡಿದ್ದು, ನಾವು ಆತುರದ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಸದನದಲ್ಲಿಯೂ ಕೂಡಾ ಹೇಳಿದ್ದೇವೆ. ಅದೇ ರೀತಿ ಇವತ್ತು ನಾವು total ಎಷ್ಟು cusecs ನೀರು ಬಿಟ್ಟಿದ್ದೇವೆಂಬುದನ್ನು ಅರ್ಥ ಮಾಡಿಕೊಂಡರೆ ಇಂದು ಅವರು ಈ ರೀತಿ ಮಾತನಾಡುತ್ತಿರಲ್ಲಿ. ಆದುದರಿಂದ ಇವತ್ತಿನ ಕಷ್ಟ

ಹಾಗೂ ಕ್ಲಿಷ್ಟ ಪರಿಸ್ಥಿತಿಯಲ್ಲಿ ನಾವು ಮನವಿ ಮಾಡುತ್ತಿದ್ದೇವೆ. ಇದೆಲ್ಲಾ ಆದರೂ ಕೂಡಾ ನಾನು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಜೆ.ಡಿ.(ಎಸ್) ಪಕ್ಷದ ನಾಯಕರುಗಳಿಗೆ ಮನವಿ ಮಾಡುತ್ತಿದ್ದೇನೆ. ದಯಮಾಡಿ ಜನರನ್ನು ಪ್ರಚೋದನೆ ಮಾಡುವುದು ಬೇಡ. ಹಿಂದೆ ಇದೇ ರೀತಿ ಪ್ರಚೋದನೆ ಆದಾಗ ಯಾವ ರೀತಿ ಸಾವು–ನೋವು ಆಗಿತ್ತು, ಅದಕ್ಕೆ ಯಾರು ಜವಾಬ್ದಾರಿ? ಹಿಂದೆ ಇದೇ ರೀತಿಯ ಪ್ರಚೋನಕಾರಿ ಭಾಷಣದಿಂದ ಸಾವುನೋವಾದ ಅನುಭವವಿದೆ. ಈ ರಾಜ್ಯದಲ್ಲಿ ಎಲ್ಲವೂ ಅನುಭವವಾಗಿದೆ. ಸರಿಯಾದ ರೀತಿಯಲ್ಲಿ ಕಾನೂನಾತ್ಮಕವಾಗಿ ನಡೆದುಕೊಳ್ಳದೆ interim ಆದೇಶ ಬಂದ ಅನುಭವವಿದೆ. ಅದನ್ನು challenge ಮಾಡಲು ಹೋಗಿ defamation ಕೇಸ್ ಹಾಕಿಸಿಕೊಂಡು ಛೀಮಾರಿ ಹಾಕಿಸಿಕೊಂಡು ರಾತ್ರೋ ರಾತ್ರಿ ನೀರು ಬಿಟ್ಟಿರುವ ಅನುಭವವಿದೆ. ಬಿಡದಿರುವ ಸಂದರ್ಭದಲ್ಲಿ ಭಾಷೆಯ ಆಧಾರದ ಮೇಲೆ ಗಲಭೆಯಾಗಿ ಹತ್ಯೆ ಆಗಿರುವ ಅನುಭವವಿದೆ. ಇದೆಲ್ಲಾ ಸನುಭವ ಇಟ್ಟುಕೊಂಡು ನಾವು ಅದೇ ತಪ್ಪನ್ನು ಮತ್ತೆ ಮಾಡುವುದು ಸರಿಯಲ್ಲ. ಆ ಕೆಲಸವನ್ನು ಮಾಡಬಾರದು. ನಮ್ಮದು ಜವಾಬ್ದಾರಿಯುತ ಸರ್ಕಾರ. ಅದೇ ರೀತಿ ಜವಾಬ್ದಾರಿಯಿಂದ ವಿರೋಧ ಪಕ್ಷದವರೂ ಕೂಡಾ ನಡೆದುಕೊಳ್ಳಬೇಕಾಗುತ್ತದೆ. ಆ ನಿಟ್ಟಿನಲ್ಲಿ ನಿಮ್ಮ ಸಹಕಾರವನ್ನು ಬಯಸುತ್ತೇವೆ. ಅವರಿಗೆಲ್ಲಾ ಸಹಕಾರವನ್ನು ನಾವು ಕೊಡಲು ಸಿದ್ಧರಿದ್ದೇವೆ. ಈ ಸಂದರ್ಭದಲ್ಲಿ ಪ್ರಚೋದನೆಗೆ ಒಳಗಾಗದೆ, emotion ಗೊಳಗಾಗದೆ, ಕಾನೂನು ಪ್ರಕಾರ ಏನೆಲ್ಲಾ ಮಾಡಬೇಕೊ ಅ ಕೆಲಸವನ್ನು ನಾವು ನೀವು ಸೇರಿ ಒಗ್ಗಟ್ಟಿನಿಂದ ಒಂದಾಗಿ ಸಮಾಧಾನದಿಂದ ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ಸಮಸ್ಯೆಗೆ ನಾವು ಪರಿಹಾರ ಕಂಡು ಹಿಡಿಯೋಣ ಮುಂದೆ civil appeals ಬರುತ್ತಿದೆ. ಅದಕ್ಕೆ ಶಾಶ್ವತವಾಗಿ ತೊಂದರೆ–ಯಾಗಬರದು. Pennywise found foolish –ಆ ರೀತಿ ಆಗದಂತೆ ನಾವು ನಿಗಾ ವಹಿಸಿ ಕೆಲಸವನ್ನು ಮಾಡಬೇಕು. ಅದಕ್ಕಾಗಿ ನಿಮ್ಮ ಸಹಕಾರವನ್ನು ಮತ್ತೋಮ್ಮೆ ಕೋರುತ್ತೇನೆ. ಒಂದು ಮಾತನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ನಾವಾಗಿ ನೀರು ಬಿಟ್ಟಿಲ್ಲ. ಸಿ.ಆರ್.ಎ. ಆದೇಶ ಮಾಡಿದರೂ ಕೂಡಾ ನೀರು ಬಿಡಲಿಲ್ಲ. ಸುಪ್ರೀಂ ಕೋರ್ಟ್ ಆದೇಶ ಬಂದಾಗ ಹಿಂದೆಲ್ಲಾ ಯಾವ ರೀತಿ ನಡೆದುಕೊಂಡರು, ಬೇರೆಲ್ಲಾ ರಾಜ್ಯಗಳು ಯಾವ ರೀತಿ ನಡೆದುಕೊಂಡರು

ಎಂಬುದನ್ನು ನೋಡಿ ಒಕ್ಕೂಟ ವ್ಯವಸ್ಥೆಗೆ ಗೌರವ ಕೊಟ್ಟು ಮಾಡಿದ್ದೇವೆ. ರಾಜ್ಯದ ಜನತೆಯ ಹಿತ ಕಾಪಾಡುವಲ್ಲಿ ಹಿಂದೆ ಬಿದ್ದಿಲ್ಲ. ಯಾವುದೇ ಕಾರಣಕ್ಕೂ ರಾಜ್ಯ ಮತ್ತು ರಾಜ್ಯದ ಜನತೆಗೆ ನಾವು ದ್ರೋಹ ಮಾಡಿಲ್ಲ ಎಂಬ ಮಾತನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಯವರು) : ಸನ್ಮಾನ್ಯ ಸಭಾಧ್ಯಕ್ಷರೆ, ಕಾವೇರಿ ವಿಚಾರವಾಗಿ ಈ ಸದನದಲ್ಲಿ ಬಹಳ ವರ್ಷದಿಂದ ಚರ್ಚೆಯಾಗುತ್ತಾ ಬಂದಿದೆ. ಹಿಂದೆಲ್ಲಾ ಯಾವ ಯಾವ ಸಂದರ್ಭದಲ್ಲಿ ಯಾರು ಯಾವ ರೀತಿ ನಡೆದುಕೊಂಡರು ಎನ್ನುವುದನ್ನು ಮಾನ್ಯ ಬೊಮ್ಮಾಯಿಯವರು ಹೇಳಿದರು. ಇಂದಿನ ವಿರೋಧ ಪಕ್ಷದ ಸದಸ್ಯರು ಇರಬಹುದು, ಜೆ.ಡಿ.(ಎಸ್) ಪಕ್ಷದ ಸದಸ್ಯರಿರಬಹುದು. ಎಲ್ಲರೂ ಒಮ್ಮೊಮ್ಮೆ ಆಡಳಿತ ಮಾಡಿ ಹೋದಂತಹವರು ಆ ಸಮಯದಲ್ಲಿ ಯಾರು ಯಾವ ರೀತಿ ನಡೆದುಕೊಂಡಿದ್ದಾರೆಂಬುದು ನಮ್ಮ ಮುಂದೆ ಇದೆ. ಇದರಲ್ಲಿ ಯಾವುದೇ ರೀತಿಯ ರಾಜಕಾರಣ ಮಾಡಬಾರದು ಎಂಬ ಮಾತನ್ನು ಮೊದಲಿನಿಂದಲೂ ಹೇಳುತ್ತಿದ್ದೇವೆ. ರಾಜ್ಯದ ಮುಖ್ಯಮಂತ್ರಿಯಾಗಿ ಕನ್ನಡದ ನೆಲ–ಜಲ ರಕ್ಷಣೆ ಮಾಡುವ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದೇನೆ. ಆ ಜವಾಬ್ದಾರಿಯಿಂದ ನಾವು ನಡೆದುಕೊಳ್ಳುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಇದರಲ್ಲಿ ಯಾವುದೇ ರೀತಿಯ ರಾಜಕಾರಣ ತೋರಿಸುವುದು ಬೇಡ ಎಂಬುದನ್ನು ಹೇಳುತ್ತಿದ್ದೇನೆ.

ಇದರಲ್ಲಿ ಯಾವುದೇ ರೀತಿ ರಾಜಕಾರಣ ಮಾಡುವಂತಹ ಅವಶ್ಯಕತೆ ಇಲ್ಲ. ಈ ರೀತಿ crisis ಬಂದಾಗ, ಅದು Supreme Court ನ ಆಜ್ಞೆ ಇರಬಹುದು ಅಥವಾ ಮತ್ತೊಂದು ನಿರ್ಣಯವನ್ನು ತೆಗೆದುಕೊಳ್ಳುವಂಥದ್ದು ಇರಬಹುದು, ಆ ಸಂದರ್ಭದಲ್ಲಿ ಇವತ್ತು Floor Leaders ಮತ್ತು ಎಲ್ಲಾ ಪಕ್ಷಗಳ ನಾಯಕರನ್ನು ಕರೆಸಿ ಮಾತನಡುವಂಥದ್ದು ಮಾಡಿದ್ದೇವೆ. ಈ ರೀತಿ–ಒಂದು critical ಸಮಸ್ಯೆ ಇದೆ, ಈ ಬಗ್ಗೆ ನಾವು ಯಾವ ರೀತಿಯಾಗಿ decision ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ consultation process ಮೊದಲಿನಿಂದಲೂ ಮಾಡಿಕೊಂಡು ಬಂದಿದ್ದೇವೆ. ಇವತ್ತು ಒಂದು ಒಕ್ಕೂಟ ವ್ಯವಸ್ಥೆಯಲ್ಲಿ ನಾವಿದ್ದೇವೆ. ಸಂವಿಧಾನಬದ್ಧವಾಗಿ ನಡೆದುಕೊಳ್ಳಬೇಕು ಎನ್ನುವಂತಹ ಪ್ರಮಾಣವನ್ನು ಸ್ವೀಕರಿಸಿ ನಾವು ಇಲ್ಲಿ ಜವಾಬ್ದಾರಿಯಿಂದ

ಕೆಲಸವನ್ನು ಮಾಡುತ್ತಿದ್ದೇವೆ, ಒಬ್ಬ ಶಾಸಕನಾಗಿ ಪ್ರಮಾಣ ವಚನ ಸ್ವೀಕರಿಸಿರುವುದು ಇರಬಹುದು, ಒಬ್ಬ ಮಂತ್ರಿಯಾಗಿ ಇರಬಹುದು, ಒಬ್ಬ ಮುಖ್ಯಮಂತ್ರಿಯಾಗಿ ಇರಬಹುದು, ಆ ಸಂವಿಧಾನದ ಪ್ರಕಾರ ನಾವು ನಡೆದುಕೊಳ್ಳುತ್ತೇವೆ ಎನ್ನುವಂತಹ ಒಂದು ಪ್ರತಿಜ್ಞೆಯನ್ನು ಮಾಡಿಕೊಂಡು ಇಲ್ಲಿ ಈ ಸಂದರ್ಭದಲ್ಲಿ ನಾವು ಬಂದಿದ್ದೇವೆ. ಆ ರೀತಿ ನಡೆದುಕೊಳ್ಳುವಂತಹ ವ್ಯವಸ್ಥೆಯಲ್ಲಿ ನಾವಿದ್ದಾಗ, ಇವತ್ತು ಆ ಕಡೆಗೆ ಕುಳಿತಿದ್ದೇವೆ ಎನ್ನುವಂತಹ ಒಂದೇ ಕಾರಣದ ಮೇಲೆ ಆ ರೀತಿ ಮಾತನಾಡಬಾರದು. ಇವತ್ತು ಸರ್ವೋಚ್ಚ ನ್ಯಾಯಾಲಯದ ಆಜ್ಞೆ ಇದು. ಅವರು directions ಕೊಟ್ಟಿದ್ದಾರೆ. ಅವರು directions ಕೊಟ್ಟಾಗ ನಾವು ಏನು ಮಾಡಬೇಕು? ಒಬ್ಬ ರಾಜ್ಯದ ಮುಖ್ಯಮಂತ್ರಿಯಾಗಿ, ಒಬ್ಬ ಮಂತ್ರಿಯಾಗಿ ನಾವು ಏನು ಮಾಡಬೇಕು ಎನ್ನುವುದನ್ನು ಇವತ್ತು ನಾನು ಸದನಕ್ಕೆ ಬಿಡುತ್ತೇನೆ. ಹಿಂದೆಲ್ಲಾ ಸುಪ್ರೀಂ ಕೋರ್ಟಿನ ಆಜ್ಞೆ ಆದಾಗ, ನಿರ್ಣಯಗಳು ಆದಾಗ, violation ಮಾಡಿದಾಗ, ಯಾವ ರೀತಿಯ ಪರಿಣಾಮಗಳಾಗಿವೆ ಎನ್ನುವುದು ನಮ್ಮ ಕಣ್ಣು ಮುಂದಿದೆ. ಹೀಗಾಗಿ ಇವತ್ತು ಎಲ್ಲಾ ರೀತಿಯ ಕಾನೂನು ಹೋರಾಟ ಮಾಡಿದಾಗಲೂ ಪ್ರಯೋಜನವಾಗಿಲ್ಲ. ಇವತ್ತು CRA ಇದೆ, ಹಾಗಾದರೆ CRA ಗೆ ನೀವೂ ಬರಬೇಕಾಗಿತ್ತಲ್ಲವೇ? ನಾನು ಮತೋಂದು ಹೇಳುತ್ತೇನೆ. ಈ ಬಗ್ಗೆ ನಾನೊಂದು ಸಲ ನೆನಪು ಮಾಡಿದ್ದೆ. All Party Meeting ನಲ್ಲಿ ಈ ಬಗ್ಗೆ ಹೇಳಿದ್ದೆ. ಹಿಂದೆ ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ, ನಾನು Leader of Opposition ಆಗಿದ್ದೆ. ಅವತ್ತು ಅವರು 'ನಾರಿಮನ್‌ರವರ ಬಳಿಗೆ ನಾವು ಹೋಗಬೇಕಾಗುತ್ತದೆ. ನಾವೆಲ್ಲರೂ ಹೋಗಿ ಅವರನ್ನು ಭೇಟಿಯಾಗಿ ಸ್ವಲ್ಪ ವಿಚಾರಗಳನ್ನು discussion ಮಾಡಬೇಕಾಗುತ್ತದೆ, ನೀವೂ ಬನ್ನಿ.' ಎಂದು ನನ್ನನ್ನು ಕರೆದರು. ನಾನು 'ರಾಜ್ಯದ ಹಿತಾಸಕ್ತಿ ಮುಖ್ಯ, ಇದರಲ್ಲಿ ಯವುದೇ party, ಪಂಗಡ ಪ್ರಶ್ನೆಯಿಲ್ಲ. ನಾನೂ ನಿಮ್ಮ ಜೊತೆಗೆ ಬರುತ್ತೇನೆ.' ಎಂದು ಹೇಳಿ ಅವತ್ತು ನಾವು ನಾರಿಮನ್‌ರವರನ್ನು ಭೇಟಿಯಾಗಿ ಬಂದೆವು. ಅವತ್ತೂ ಕೂಡ ಅದೇ ನಾರಿಮನ್‌ರವರು ಇದ್ದರು. ಅವತ್ತು ನಾವೆಲ್ಲರೂ ಕೂಡಿಕೊಂಡು ಒಟ್ಟಿಗೆ ಅವರ ಮನೆಗೆ ಹೋಗಿ ಚರ್ಚೆಯನ್ನು ಮಾಡಿಕೊಂಡು ಬಂದಿದ್ದೆವು. ನಾನು ನಮ್ಮ ಮಾನ್ಯ ಸಿದ್ದರಾಮಯ್ಯನವರಿಗೆ ಒಂದು ಸಲ ನಾವೆಲ್ಲರೂ ಕೂಡಿ ನಾರಿಮನ್‌ರವರನ್ನು ಭೇಟಿ ಮಾಡಿ ಇದರ

consequences ಏನಾಗುತ್ತದೆ ಎಂದು ಅವರು ಜೊತೆಯಲ್ಲಿ ಸಮಗ್ರವಾದಂತಹ ಚರ್ಚೆ ಮಾಡೋಣ ಎಂದು ಹೇಳಿದ್ದೆ. ನಾವು, ಬೊಮ್ಮಾಯಿಯವರು ಮತ್ತು ಸುರೇಶ್ ಕುಮಾರ್‌ರವರು ಹಾಗೂ ನಮ್ಮ ಇನ್ನಿತರ ಎಲ್ಲಾ ಸಚಿವರು ಈ ರೀತಿ ಪರಿಸ್ಥಿತಿ ಇದೆ ಎನ್ನುವುದನ್ನು ಹೇಳುತ್ತಿದ್ದೇವೆ. ಮೊನ್ನೆಯೂ ಸಾಯಂಕಾಲ ನಾವು ಹೋಗಿ ಅವರ ಹತ್ತಿರ ಈ ರೀತಿ ಪರಿಸ್ಥಿತಿ ಇದೆ, drinking water ಪರಿಸ್ಥಿತಿ ಬಹಳ critical ಇದೆ, ನಾಳೆಯೂ 2.44 ಟಿಎಂಸಿ ನೀರನ್ನು ಬಿಟ್ಟರೆ ಏನು ಅನಾಹುತವಾಗುತ್ತದೆ ಎಲ್ಲವನೂ ನಾವು convince ಮಾಡಿದ್ದೇವೆ ಇಷ್ಟೆಲ್ಲಾ ಅದ ಮೇಲೂ ಅವರು ನಮಗೆ advise ಮಾಡಿದ್ದು ಏನೆಂದರೆ, ಇಲ್ಲ, ನಾವು ಒಕ್ಕೂಟ ವ್ಯವಸ್ಥೆಯಲ್ಲಿದ್ದೇವೆ, ನಾವು ಸಂವಿಧಾನ ಬದ್ಧವಾಗಿ ನಡೆದುಕೊಳ್ಳಬೇಕಾಗುತ್ತದೆ, 'ಆ ದೃಷ್ಟಿಯಿಂದ ಇವತ್ತು ಇದನ್ನು comply ಮಾಡಿಕೊಂಡು ಬನ್ನಿ, Review Petition ನಾನು file ಮಾಡುತ್ತೇನೆ'. ಎನ್ನುವಂತಹ ಮಾತನ್ನು ಹೇಳಿದ್ದಾರೆ. ಆ ದೃಷ್ಟಿಕೋನದಿಂದ, ಎಲ್ಲವನ್ನೂ ಸಾರಸಗಟಾಗಿ ವಿಚಾರ ಮಾಡಿಕೊಂಡು ನೀರು ಬಿಟ್ಟಿದ್ದೇವೆ. ನಾವೇನೂ ನೀರು ಬಿಟ್ಟು ಬಹಳ ಸಂತೋಷವಾಗಿ ಇಲ್ಲ. ಆದರಿಂದ ನಮ್ಮ ಮನಸ್ಸಿಗೆ ಬಹಳಷ್ಟು ನೋವಾಗಿದೆ. ಆ ನೀರು ಬಿಡದಿದ್ದರೆ, ನಾಳೆ ಏನು ಪರಿಸ್ಥಿತಿ ಆಗುತ್ತದೆ? ಎನ್ನುವುದೆಲ್ಲವನೂ ವಿಚಾರ ಮಾಡಿಕೊಂಡು, ಬಹಳ ಭಾರವಾದ ಹೃದಯದಿಂದ ನಾವು ನೀರನ್ನು ಬಿಡುವಂತಹ ನಿರ್ಣಯವನ್ನು ಕೈಗೊಂಡಿದ್ದೇವೆ. ಇದೇನು ಬಹಳ ಖುಷಿಯಿಂದ, voluntary ಯಾಗಿ ನೀರು ಬಿಟ್ಟದ್ದಲ್ಲ. ಇದರಿಂದ ನಮಗೆ ಏನು ತೊಂದರೆಯಾಗುತ್ತದೆ? ಇದರಿಂದ ನಮ್ಮ ಕನ್ನಡ ಜನತೆ ಏನನ್ನು ಅನುಭವಿಸುತ್ತಾರೆ? ಎಲ್ಲೆಲ್ಲಿ drinking water ಪರಿಸ್ಥಿತಿ ಏನಾಗುತ್ತದೆ? ಎಲ್ಲವನ್ನೂ ತಿಳಿದುಕೊಂಡು ನೀರು ಬಿಡುವ ಕೆಲಸ ಮಾಡಿದ್ದೇವೆ. ಅದು ಸುಪ್ರೀಂ ಕೋರ್ಟ್ directions ಆಗಿತ್ತು. ಸಂವಿಧಾನಬದ್ಧವಾಗಿ ನಾವು ನಡೆದುಕೊಳ್ಳಬೇಕು ಎನ್ನುವಂತಹ ಕಾರಣ ಮೇಲೆ ಮತ್ತು ನಾಳೆ ಮುಂದಾಲೋಚನೆ, ಮುಂದಿನ ಗುರಿಯನ್ನು ನಾವು ಸಾಧನೆ ಮಾಡಬೇಕು ಎನ್ನುವಂತಹ ದೃಷ್ಟಿಯಿಂದ ಇವತ್ತು ನೀರು ಬಿಟ್ಟಿದ್ದೇವೆಯೇ ಹೊರತು, ಇದರಲ್ಲಿ ಯಾವುದೇ ಒಂದು ರಾಜಕಾರಣ ಮಾಡುವಂಥದ್ದು ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಇವತ್ತು ಹೇಳಿದರು. ಇಲ್ಲ, ನೀವು

ರಾಜೀನಾಮೆ ಕೊಟ್ಟು ಹೋಗಿಬಿಡಿ ಎಂದು ಹೇಳಿದರು. ನೋಡಿ, ಆ ತರಹ, ಯಾವುದೇ ಒಂದು ದೃಷ್ಟಿಕೋನದಿಂದ, ಯಾವಾಗಲೂ ಅಧಿಕಾರಕ್ಕೆ ಅಂಟಿಕೊಳ್ಳುವ ವ್ಯಕ್ತಿ ನಾನಲ್ಲ. ನಾನು ವೈಯಕ್ತಿಕವಾಗಿ ಇದನ್ನು ಹೇಳುತ್ತಿದ್ದೇನೆ. ಇಂತಹ crisis ಬಂದಾಗ ನಾವು ಅಧಿಕಾರ ಬಿಟ್ಟು ಹೋಗಲಿಕ್ಕೆ ಯಾವಾಗಲೂ ರೆಡಿಯಿದ್ದೇನೆ. ಎಂದಿಗೂ ಅಧಿಕಾರಕ್ಕೆ ಅಂಟಿಕೊಂಡು ಇರುವಂತಹ ವ್ಯಕ್ತಿ ನಾನಲ್ಲ ನಾನು ಇವತ್ತು ರಾಜೀನಾಮೆ ಕೊಟ್ಟು, ಈ ಅಧಿಕಾರ ತ್ಯಜಿಸುವುದರಿಂದ ಇದಕ್ಕೆ solution ಸಿಗುತ್ತದೆ ಎನ್ನುವುದಾದರೆ, ನಾನು ಇವತ್ತೇ, ಈ ಕ್ಷಣವೇ ಅಧಿಕಾರ ಬಿಟ್ಟು ಕೊಡಲಿಕ್ಕೆ ತಯಾರಾಗಿದ್ದೇನೆ. ನಾಳೆ ಈ directions violation ಮಾಡುವುದರಿಂದ, ಆದರಿಂದ ನನಗೆ punishment ಆಗಿ ನಾವು ಜೈಲಿಗೆ ಹೋಗಬೇಕಾದ ಬಂದರೆ, ಅದರಿಂದ ಏನಾದರೂ ಪರಿಹಾರ ಸಿಗುತ್ತದೆ ಎನ್ನುವುದಾದರೆ, ಅದಕ್ಕೂ ನಾನು ತಯರಾಗಿದ್ದೇನೆ. ಈ ಒಂದು ಕನ್ನಡದ ನೆಲ, ಜಲ ರಕ್ಷಣೆಗೆ ಎಲ್ಲದಕ್ಕೂ ನಾವು ತಯಾರಾಗಿದ್ದೇವೆ. ಅಧಿಕಾರಕ್ಕೆ ಅಂಟಿಕೊಂಡು ಕೂರಬೇಕೆಂದು ನನಗೇನೂ ಇಲ್ಲ. ಅಧಿಕಾರ ಯಾರಿಗೂ ಶಾಶ್ವತವಲ್ಲ. ಇವತ್ತು ನಾಲ್ಕು ದಿವಸ ಅಧಿಕಾರದಲ್ಲಿ ಇರಬಹುದು, ಇನ್ನು ನಾಲ್ಕು ದಿವಸ ಅಧಿಕಾರದಲ್ಲಿ ಇರದಿರಬಹುದು. ಅಧಿಕರದ ಸಲುವಾಗಿ ನಾವು ಇದನ್ನೆಲ್ಲಾ ಮಾಡುತ್ತಿದ್ದೇವೆ ಎನ್ನುವುದು ನಿಮ್ಮ ತಪ್ಪು ಕಲ್ಪನೆಯಾಗಿದೆ. ಆ ರೀತಿಯಾದಂತಹ ಹೇಳಿಕೆ ಕೊಡುವುದು ಏನು ಇದೆಯಲ್ಲಾ, ಅದು ಸರಿಯಾದುದುದಲ್ಲ, ಅದು ಜವಾಬ್ದಾರಿಯುತವಾದಂತಹ ಹೇಳಿಕೆಯಾಗುವು-ದಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಹೀಗಾಗಿ ಇಂಥದ್ದಕ್ಕೆ ಯಾವುದಕ್ಕೂ ನಾವು ಅವಕಾಶ ಕೊಡುವುದಿಲ್ಲ. ಮುಂದೆ ಯಾವುದೇ ರೀತಿಯಾದಂತಹ consequences ಆಗಬಾರದು, ಕಾನೂನು ತೊಡಕುಗಳು ಆಗಬಾರದು, ನಾಳೆ long run ನಲ್ಲಿ ತೊಂದರೆಯಾಗಬಾರದು ಎಂದು ನೀರು ಬಿಟ್ಟಿದ್ದೇವೆ. ಇವತ್ತು ತಮಿಳುನಾಡಿನ ವಿಚಾರ ಹೇಳಬೇಕಾದರೆ, ಇಲ್ಲಿಯವರೆಗೂ ಅವರೇನು affidavit ಕೊಡುತ್ತಿದ್ದರೋ, ಏನೊಂದು facts ಗಳನ್ನು ಹೇಳುತ್ತಿದ್ದರೋ, ಅದು ಸುಳ್ಳು ಎನ್ನುವುದು prove ಆಯಿತು. ಮೊನ್ನೆ ನಡೆದಂತಹ hearing ನಲ್ಲಿ ಸುಪ್ರೀಂ ಕೋರ್ಟ್‌ನವರೇ ತಮಿಳುನಾಡಿನವರೆ, ನೀವು false ಹೇಳಿದ್ದೀರಿ, ಬಹಳಷ್ಟು ವಿಚಾರಗಳು

ನಿಮ್ಮದೇನಿದೆ, ನಿಮ್ಮ facts ನಲ್ಲಿ ಸತ್ಯಾಂಶ ಇಲ್ಲ ಎನ್ನುವುದನ್ನು ಹೇಳಿದ್ದಾರೆ. ಇವತ್ತು ಸುಪ್ರೀಂ ಕೋರ್ಟ್‌ನವರು ಆ ರೀತಿ ಹೇಳಿರುವುದನ್ನು ನಾವು ನೋಡುತ್ತಿದ್ದೇವೆ. ಈ ರೀತಿ ವಸ್ತುಸ್ಥಿತಿ ಇದ್ದಂತಹ ಸಂದರ್ಭದಲ್ಲಿ, ಇವತ್ತು ನಮ್ಮ ನೆಲ, ಜಲದ ರಕ್ಷಣೆಗೆ ಯಾವ ರೀತಿಯಾಗಿ ಕೆಲಸ ಮಾಡಬೇಕೋ, ಅದಕ್ಕೂ ನಾವು ಬದ್ಧರಿದ್ದೇವೆ, ಯಾವುದೇ ಸಂದರ್ಭದಲ್ಲೂ ರಾಜಿ ಮಾಡಿಕೊಳ್ಳುವಂತಹ ಪ್ರಶ್ನೆ ಇಲ್ಲ. ಅಂತಹ ಪ್ರಸಂಗ ಬಂದರೆ ಅಧಿಕಾರ ತ್ಯಾಗ ಮಡಲಿಕ್ಕೂ ನಾವು ತಯಾರಿದ್ದೇವೆ. ಆದರೆ ಇವತ್ತು ಒಂದು ಸಂವಿಧಾನದ ಕಟ್ಟಳೆಯೊಳಗೆ ಇದ್ದದ್ದರಿಂದ, ಒಂದು ಒಕ್ಕೂಟ ವ್ಯವಸ್ಥೆಯಲ್ಲಿ ಇದ್ದದ್ದರಿಂದ, ಅದಕ್ಕನುಗುಣವಾಗಿ ಒಬ್ಬ ಮುಖ್ಯಮಂತ್ರಿಯಾಗಿ ನಾನು ನಡೆದು–ಕೊಳ್ಳಬೇಕಾಗಿತ್ತು. ಆ ಕೆಲಸವನ್ನು ಮಾಡಿತ್ತಿದ್ದೇನೆಯೇ ಹೊರತು, ಇವತ್ತು ಏನೋ ನಾಲ್ಕು ದಿವಸ ಅಧಿಕಾರ ಇರುತ್ತದೆ ಎನ್ನುವ ಕಾರಣದ ಸಲುವಾಗಿ, ಇದೆಲ್ಲಾ ಯಾವ ಕೆಲಸವನ್ನೂ ನಾನು ಮಾಡುತ್ತಿಲ್ಲ. ಆ ದೃಷ್ಟಿಯಿಂದ ನಮ್ಮದು ಸ್ಪಷ್ಟವಾದಂತಹ ನಿಲುವಿದೆ. ಇವತ್ತು ನಾವು ನಾರಿಮನ್‌ರವರಿಗೆ ಈ ರೀತಿ ಪರಿಸ್ಥಿತಿ ಇದೆ, ಬಹಳಷ್ಟು ಗಂಭೀರ ಪರಿಸ್ಥಿತಿ ಇದೆ. ನಾವು ಹೀಗೇ ನೀರು ಬಿಟ್ಟುಕೊಂಡು ಹೊದರೆ, ಮುಂದೆ ಬಹಳ ನಮ್ಮ ಬೆಂಗಳೂರಿನಲ್ಲಿ ಇರಬಹುದು, ಇನ್ನಿತರ ಪಟ್ಟಣಗಳಲ್ಲಿ ಇರಬಹುದು, ಬಹಳಷ್ಟು ತೊಂದರೆ–ಯಾಗಲಿಕ್ಕೆ ಸಾಧ್ಯವಿದೆ. ಎಂಬುದನೆಲ್ಲಾ ಗಮನಕ್ಕೆ ತೆಗೆದುಕೊಂಡು ಬಂದಿದ್ದೇವೆ. ಹೀಗಾಗಿ ಆ ದೃಷ್ಟಿಯಿಂದ preliminary ಯಾಗಿ ಇವತ್ತೇನು ನಾವು comply ಮಾಡಬೇಕೋ, ಅದನ್ನು ನಾವು ಮಾಡುತ್ತಿದ್ದೇವೆ. ಇವತ್ತು ಸುಪ್ರೀಂ ಕೋರ್ಟ್‌ನಲ್ಲಿ ಈ ಒಂದು Review Petition file ಮಾಡಬೇಕೆನ್ನುವ ವಿಚಾರವನ್ನು ಹೇಳಿದ್ದೇವೆ. ಅವರು ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಹೀಗಾಗಿ ಅದರ ಬಗ್ಗೆ ಅದಷ್ಟು ಬೇಗನೆ ನಾವು ಕ್ರಮವೊಂದನ್ನು ಕೈಗೊಳ್ಳುತ್ತೇವೆ. ಇದಕ್ಕಾಗಿ ನಾನು ಎಲ್ಲರ ಸಹಕಾರವನ್ನು ಕೇಳುತ್ತಿದ್ದೇನೆ. ಇಲ್ಲಿರುವಂತಹ ಎಲ್ಲಾ ಸದಸ್ಯರು, ಅವರು ಯಾವುದೇ ಪಕ್ಷದವರಾಗಿರಲಿ, ಎಲ್ಲರ ಸಹಕಾರ ತೆಗೆದುಕೊಂಡು, ಈ ರೀತಿ ಒಂದು public issue, ಇರುವುದರಿಂದ, ಇಡೀ ಕರ್ನಾಟಕ ರಾಜ್ಯದ ಹಿತಾಸಕ್ತಿ ಇರುವುದರಿಂದ, ಇದರಲ್ಲಿ ಎಲ್ಲರೂ ಕೂಡಿಕೊಂಡು ನಾವು ಕೆಲಸ ಮಾಡಬೇಕಾಗಿದೆ. ಅದಕ್ಕಾಗಿ ಎಲ್ಲರ ಸಹಕಾರ ಕೋರುತ್ತೇನೆ. ಇನ್ನೊಂದು

ವಿಚಾರವನ್ನು ನಾನು ಹೇಳುತ್ತೇನೆ. ಇಲ್ಲಿ ಯಾವುದೇ ಉತ್ತರ ಭಾಗ ಅಥವಾ ದಕ್ಷಿಣ ಭಾಗ ಎಂಬುದಿಲ್ಲ. ಅಲ್ಲಿ ಹೆಚ್ಚಿಗೆ ಮಾಡಿದರು, ಇಲ್ಲಿ ಹೆಚ್ಚಿಗೆ ಎನ್ನುವ ಯಾವುದೇ ತಾರತಮ್ಯ ನಮಗೆ ಇಲ್ಲ. ಇದಕ್ಕಾಗಿ ಸಾಕಷ್ಟು ಹೋರಾಟವನ್ನು ಮಾಡಿದ್ದೇವೆ. ನಾವು ಮತ್ತು ಮಾನ್ಯ ಬೊಮ್ಮಾಯಿಯವರು, ಸಾಕಷ್ಟು ಹೋರಾಟವನ್ನು ಮಾಡಿದ್ದೇವೆ. ಇದರಲ್ಲಿ ಯಾವುದೇ ಒಂದು ತಾರತಮ್ಯವನ್ನು ನಾವು ಎಂದಿಗೂ ಮಾಡಿಲ್ಲ. ಆ ದೃಷ್ಟಿಯಿಂದ ಇದನೆಲ್ಲಾ ಯಾರೊಬ್ಬರ ಮನಸ್ಸಿನಲ್ಲಿ ಬಿತ್ತನೆ ಮಾಡುವಂತಹ ಕೆಲಸ ಆಗಬಾರದು ಎಂಬ ಮಾತನ್ನು ನಾನು ಹೇಳುತ್ತೇನೆ. ಈ ದಿಸೆಯಲ್ಲಿ ಎಲ್ಲರ ಸಹಕಾರವನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ :– ಈಗ ನಾನು ಹೇಳುವುದು ಎಂದರೆ, ಮೊನ್ನೆ ನಮ್ಮನ್ನೆಲ್ಲಾ ಇವರು All-party floor leaders ಸಭೆ ಕರೆದಾಗ ಆ ಸಭೆಗೆ ಮಾನ್ಯ ಬಾಲಕೃಷ್ಣರವರು ಬಂದಿರಲಿಲ್ಲ, ಮಾನ್ಯ ರೇವಣ್ಣನವರು ಬಂದಿದ್ದರು. ನೀವು ನೀರು ಬಿಡಬೇಡಿ, ಹಾಗೆಯೇ Review petition ಹಾಕಿ ಎಂದು ನಾವು ಹೇಳಿದ್ದೆವು. ಆ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ ಎನ್ನುವುದಿದ್ದಾಗ, ನಮ್ಮನ್ನೇಕೆ ಸಭೆಗೆ ಕರೆದಿರಿ? ನಮ್ಮನ್ನು ಕರೆದು, ನಾವು ನಮ್ಮ ಅಭಿಪ್ರಾಯವನ್ನು ಕೊಟ್ಟ ಮೇಲೆ, ನಾವು ಎಲ್ಲಾ ಸಂದರ್ಭದಲ್ಲೂ ಇವರಿಗೆ co-operate ಮಾಡಿಕೊಂಡು ಬಂದಿಲ್ಲವೇ? Review petition ಹಾಕಬೇಕಾಗಿತ್ತು.

ಶ್ರೀ ಬಸವರಾಜ ಬೊಮ್ಮಾಯಿ :– ನಿಮಗೆ ನಾವೇನು ಹೇಳಿದ್ದೆವು? ಮಾನ್ಯ ನಾರಿಮನ್‌ರವರ ಜೊತೆಯಲ್ಲಿ ಚರ್ಚೆ ಮಾಡಿದ ಮೇಲೆ, ಮತ್ತೆ ನಿಮ್ಮ ಹತ್ತಿರ ಮಾತನಾಡುತ್ತೇವೆಂದು ಹೇಳಿದ್ದೆವು. ಆ ಪ್ರಕಾರ ಮಾನ್ಯ ನಾರಿಮನ್‌ರವರು, comply ಮಾಡಿ ಎಂದು ಹೇಳಿದಂತಹ ವಿಚಾರವನ್ನು ನಾನು ನಿಮ್ಮ ಮುಂದೆ ಇಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ :– ನಿವು ನಾರಿಮನ್‌ರವರಿಗೆ Review petition ಹಾಕಿ ಎಂದು ಹೇಳಬೇಕಾಗಿತ್ತು. ಇಲ್ಲದಿದ್ದರೆ ರಾಜೀನಾಮೆ ಕೊಟ್ಟು ಹೋಗಿ ಎಂದು ಅವರಿಗೆ ನೀವು ಹೇಳಬೇಕಾಗಿತ್ತು.

ಶ್ರಿ ಬಸವರಾಜ ಬೊಮ್ಮಾಯಿ :– ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದರೋ, ಅದನ್ನೂ ಸಹ ನಾವು ಮಾನ್ಯ

ನಾರಿಮನ್‌ರವರಿಗೆ ಹೇಳಿದ್ದೇವೆ. ಮತ್ತೆ ಆ ಬಗ್ಗೆ ಚರ್ಚೆ ಸಹ ಮಾಡಿದ್ದೇವೆ. ಅವರು writing ನಲ್ಲಿ ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ :– This is my suggestion. See, he is an advocate appearing on behalf of the Government.

ಶ್ರಿ ಬಸವರಾಜ ಬೊಮ್ಮಾಯಿ :– Yes, Sir.

ಶ್ರೀ ಸಿದ್ದರಾಮಯ್ಯ :– We cannot go always on the advice of Mr.Nariman.

ಶ್ರಿ ಬಸವರಾಜ ಬೊಮ್ಮಾಯಿ :– ನೋಡಿ, ನಾನು ಹೇಳುತ್ತೇನೆ ಕೇಳಿ.

ಶ್ರೀ ಸಿದ್ದರಾಮಯ್ಯ :– ಅವರಿಗಿಂತ ಒಳ್ಳೆಯ lawyers ದೇಶದಲ್ಲಿ ಇದ್ದಾರೆ. Mr.Nariman is not alone.

ಶ್ರಿ ಬಸವರಾಜ ಬೊಮ್ಮಾಯಿ :– ಅದನ್ನು ಮಾಡೋಣ.

ಶ್ರೀ ಸಿದ್ದರಾಮಯ್ಯ :– ಅವರೊಬ್ಬರೇ ಒಳ್ಳೆಯ ಲಾಯರ್ ಅಲ್ಲ. ನಾನು ಈ ಮಾತನ್ನು ಅವತ್ತೂ ಹೇಳಿದ್ದೆ, ಇವತ್ತೂ ಹೇಳುತ್ತಿದ್ದೇನೆ.

ಶ್ರಿ ಬಸವರಾಜ ಬೊಮ್ಮಾಯಿ :– ನಿಮ್ಮ ಆಡಳಿತದಿಂದಲೂ ಅವರೇ Chief Lawyer ಆಗಿದ್ದಾರೆ.

ಶ್ರೀ ಸಿದ್ದರಾಮಯ್ಯ :– ಹಾಗೆಂದು ನೀವೂ ಅವರನ್ನೇ ಇಟ್ಟುಕೊಳ್ಳ–ಬೇಕು ಎಂದೇನಿಲ್ಲ. ಯಾವ್ಯಾವ ಸನ್ನಿವೇಶದಲ್ಲಿ ನಮಗೆ ಸೋಲಾಗುತ್ತದೋ, ಆಗ ಬೇರೆಯವರನ್ನು ಇಟ್ಟುಕೊಳ್ಳಬೇಕಾಗುತ್ತದೆ.

ಶ್ರಿ ಬಸವರಾಜ ಬೊಮ್ಮಾಯಿ:– ಆ ಪ್ರಸಂಗ ಬಂದಾಗ ನೋಡೋಣ.

ಶ್ರೀ ಸಿದ್ದರಾಮಯ್ಯ :– ಮಾನ್ಯ ಅಧ್ಯಕ್ಷರೆ, for instance, what is the presumption one could draw? ಅವರು ಸುಳ್ಳು ಹೇಳಿದ್ದಾರೆ. ನಮಗೆ 9 ಟಿಎಂಸಿ ನೀರು ಒಂದು ಸಲ, ಇನ್ನೊಂದು ಸಲ ನಮಗೆ 12 ಟಿಎಂಸಿ ನೀರು ಬೇಕೆಂದು ಅವರು ಸುಳ್ಳು ಹೇಳಿದ್ದಾರೆ. ಆದರೂ ನೀವು ನೀರು ಬಿಡಿ ಎಂದು ಹೇಳುತ್ತಾರೆಲ್ಲಾ, ಇದನ್ನು ಏನೆಂದು ತಿಳಿದುಕೊಳ್ಳುವುದು? ನೀರು ಅವರಿಗೆ ಬೇಕಾಗಿಲ್ಲ. They are demanding the water for their crop.

ಶ್ರಿ ಬಸವರಾಜ ಬೊಮ್ಮಾಯಿ :– ಸಾರ್, ದಯವಿಟ್ಟು ನೀವು ಅರ್ಥ ಮಾಡಿಕೊಳ್ಳಿ.

ಶ್ರೀ ಸಿದ್ದರಾಮಯ್ಯ :- ಅವರು ತಮ್ಮ ಕ್ರಾಪ್‌ಗಾಗಿ ನೀರು ಕೇಳುತ್ತಿದ್ದಾರೆ. ಆದರೆ ನಮಗೆ ಇಲ್ಲಿ ಕುಡಿಯಲಿಕ್ಕೇ ನೀರಿಲ್ಲ.

ಶ್ರಿ ಬಸವರಾಜ ಬೊಮ್ಮಾಯಿ :- ಸರ್, ಸುಪ್ರೀಂ ಕೋರ್ಟ್‌ನಲ್ಲಿ, ಜಲ ಆಯೋಗ ಹೋಗಿ report ಮಾಡುವುದಕ್ಕಿಂತ ಮುಂಚೆ, ಅದು ಏನಾದರೂ ಆಗಿರಲಿ, 2 ಟಿಎಂಸಿ ನೀರು ಬಿಡಿ ಎಂದು ಹೇಳುತ್ತಾರೆ.

ಶ್ರೀ ಸಿದ್ದರಾಮಯ್ಯ :- ನಮಗೆ ಇಲ್ಲಿ ಕುಡಿಯಲಿಕ್ಕೇ ನೀರಿಲ್ಲ. ನಾವು ಜನಗಳಿಗೆ ಏನೆಂದು ಹೇಳುವುದು?

ಶ್ರಿ ಬಸವರಾಜ ಬೊಮ್ಮಾಯಿ :- ಜಲ ಆಯೋಗ ಹೋಗಿ ಬಂದ ಮೇಲಾದರೂ ಆ ಮಾತನ್ನು ಅವರು ಹೇಳಬೇಕಾಗಿತ್ತಲ್ಲವೇ? ಅವರು ಹೋಗಿ ಬರಲಿ, ಬರದಿರಲಿ, 2 ಟಿಎಂಸಿ ನೀರು ಬಿಡಿ ಎಂದು ಸುಪ್ರೀಂ ಕೋರ್ಟ್‌ನವರು ಹೇಳುತ್ತಾರೆ.

ಶ್ರೀ ಸಿದ್ದರಾಮಯ್ಯ :- ನೀವು ಮಂಡ್ಯ ದಾರಿಯಲ್ಲಿ ಹೋಗಿ ಜನಗಳಿಗೆ ಹಾಗೆಂದು ಹೇಳಿ ನೋಡೋಣ. ನಾವು ಒಕ್ಕೂಟ ವ್ಯವಸ್ಥೆಯಲ್ಲಿದ್ದೇವೆ ಎಂದರೆ ಅವರು ಕೇಳುತ್ತಾರೆಯೇ? 'ನಾವು ಒಕ್ಕೂಟ ವ್ಯವಸ್ಥೆಯಲ್ಲಿದ್ದೇವೆ, ಆದ್ದರಿಂದ ನೀರು ಬಿಡಬೇಕಾಗುತ್ತದೆ, ನಮ್ಮ ನಾರಿಮನ್ ಆ ರೀತಿ ಹೇಳಿದ್ದಾರೆ' ಎಂದರೆ ಅವರು ಕೇಳುತ್ತಾರೆಯೇ?

ಶ್ರಿ ಬಸವರಾಜ ಬೊಮ್ಮಾಯಿ :- ಮಾನ್ಯ ನಾರಿಮನ್‌ರವರು ಹೇಳಿದ ರೀತಿಯಲ್ಲಿ ನಾವು ನೀರು ಬಿಟ್ಟಿಲ್ಲ. ಆದಾಗ್ಯೂ ಕೂಡ ನಾವು ಬುದ್ಧಿವಂತಿಕೆ-ಯಿಂದ ನೀರನ್ನು ಬಿಟ್ಟಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ :- Our stand is that ನೀವು ನೀರು ಬಿಡದೆ Review Petition ಹಾಕಬೇಕಾಗಿತ್ತು. ನೀರು ಬಿಡದೇ ಆ ರೀತಿ ಮಾಡಬೇಕಾಗಿತ್ತು.

ಶ್ರಿ ಬಸವರಾಜ ಬೊಮ್ಮಾಯಿ :- ಸರ್ ದಯವಿಟ್ಟು ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ನಾನು ಇದನ್ನು ಹೇಳಬೇಕೋ ಬೇಡವೋ ಗೊತ್ತಿಲ್ಲ. ಬಿಳಿಗೊಂಡ್ಲು ರೀಡಿಂಗ್ ಕಳೆದ ನಾಲ್ಕು ದಿವಸದಿಂದ 1,000 ಕ್ಯೂಸೆಕ್ಸ್ ನೀರು ಹರಿದಿದೆ ಎಂದು ಹೇಳುತ್ತದೆ, ಅದಕ್ಕಿಂತ ಹೆಚ್ಚು ಹರಿದಿಲ್ಲ. ಇವತ್ತು ಬೆಳಿಗ್ಗೆಯೂ ಕೂಡ ಹೆಚ್ಚಾಗಿಲ್ಲ.

ಶ್ರೀ ಸಿದ್ದರಾಮಯ್ಯ :– ಎಷ್ಟೇ ಇರಲಿ, ನೀರನಂತೂ ಬಿಟ್ಟಿದ್ದೀರಲ್ಲಾ? Is it not a fact that water is allowed.

ಶ್ರೀ ಬಸವರಾಜ ಬೊಮ್ಮಾಯಿ :– Only 2,000 cusecs is going.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ :– ಅವರು ನಮಗೆ ಕುಡಿಯುವ ನೀರಿಗೆ ಬೇಕು ಎನ್ನುವ ಮಾತನ್ನು ಹೇಳಿದ್ದರು. ನೀವು ಹೇಳಿರಲಿಲ್ಲವೇ?

(ಗೊಂದಲ)

ಅಧ್ಯಕ್ಷರು:– ಎಲ್ಲರೂ ಎದ್ದು ನಿಂತು ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ :– ನೀವು ಆವೇಶದಿಂದ ಮಾತನಾಡಿದ ತಕ್ಷಣ, ಅದರಿಂದ ಏನೂ ಲಾಭವಾಗುವುದಿಲ್ಲ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ :– ನಾನು ಆವೇಶದಿಂದ ಏನೂ ಮಾತನಾಡುತ್ತಿಲ್ಲ. ನಾನು emotional ಆಗಿ ಮಾತನಾಡುತ್ತಿಲ್ಲ. ನೀವು emotional ಆಗಿ ಮಾತನಾಡುತ್ತಿದ್ದೀರಿ. ನಮಗೇನೂ ಆವೇಶ ಇಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ :– Emotional ಆಗಿ ನೀವು ಉತ್ತರ ಕೊಟ್ಟು ಬಿಟ್ಟರೆ, ಕುಡಿಯುವ ನೀರೇನೂ ಬಂದು ಬಿಡುವುದಿಲ್ಲ.

(ಗೊಂದಲ)

ಅವೇಶದಿಂದ ಮಾತನಾಡಿದರೆ ಜನರಿಗೆ ಕುಡಿಯುವುದಕ್ಕೆ ನೀರು ಬರುತ್ತದೆಯೇ ? ಎಮೋಷನ್ ನಲ್ಲಿ ಉತ್ತರ ಕೊಟ್ಟರೆ ಏನೂ ಅಗುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ : ನಮಗೇನು ಆವೇಶವಿಲ್ಲ, ಫ್ಯಾಕ್ಟ್ಸ್ ಹೇಳಿದ್ದೇವೆ, ಸತ್ಯ ಹೇಳಿದ್ದೇವೆ.

ಶ್ರೀ ಸಿದ್ದರಾಮಯ್ಯ : ಈಗಾಗಲೇ ನೀರನ್ನು ಬಿಡಲಾಗಿದೆ, ಅದು ತಪ್ಪೆಂದು ಒಪ್ಪಿಕೊಳ್ಳಿ..

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ನೀವು ಆ ಕಡೆ ಇದ್ದಾಗ ರೀತಿ, ಈ ಕಡೆ ಇದ್ದಾಗ ಒಂದು ರೀತಿ ಮಾತನಾಡಿದರೆ ಹೇಗೆ? ಈ ವಿಚಾರದಲ್ಲಿ ಆ ಕಡೆ ಇರಲಿ, ಈ ಕಡೆ ಇರಲಿ ಒಂದೇ ರೀತಿ ಇರಬೇಕು ಈ ಕಡೆ ಒಂದು ನಿಲುವು, ಆ ಕಡೆ ಒಂದು ನಿಲುವು ತಾಳುವ ಬದಲು, ಕಾವೇರಿ ವಿಚಾರದಲ್ಲಿ ಒಂದೇ ನಿಲುವು ಇರಬೇಕು.

ಶ್ರೀ ಸಿದ್ದರಾಮಯ್ಯ : ಆ ಕಡೆ ಒಂದು ನಿಲುವು ಈ ಕಡೆ ಒಂದು ನಿಲುವು ಎನ್ನುವ ಪ್ರಶ್ನೆಯಲ್ಲ ಇವತ್ತು ಜನರಿಗೆ ಕುಡಿಯುವುದಕ್ಕೆ ನೀರಿಲ್ಲ, ನಾನು ಇಲ್ಲಿ ಕುಳಿತಾಗಲೂ ಒಂದೇ ಅಲ್ಲಿ ಕುಳಿತಾಗಲೂ ಒಂದೇ..[ಗೊಂದಲ]

ಶ್ರೀ ಬಸವರಾಜ ಬೊಮ್ಮಾಯಿ : ಎಲ್ಲಾ ಬದಲಾವಣೆಯಾಗಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅಲ್ಲಿ ಕುಳಿತಾಗಲೂ ನೀರಿನ ಬಗ್ಗೆ ಮಾತನಾಡಿದ್ದೇನೆ, ಇಲ್ಲಿ ಕುಳಿತಾಗಲೂ ಕುಡಿಯುವ ನೀರಿನ ಬಗ್ಗೆ ಮಾತನಾಡುತ್ತಿದ್ದೇನೆ..

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಈ ಕಡೆ ಇದ್ದಾಗ ನೀರು ಬಿಡುತ್ತಾರೆ, ಆ ಕಡೆ ಇದ್ದಾಗ ನೀರು ಬಿಡಬೇಡಿ ಎನ್ನುತ್ತಾರೆ..

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾವು ಯಾವತ್ತೂ ಆ ರೀತಿಯ ಕೆಲಸವನ್ನು ಮಾಡೇ ಇಲ್ಲ.

ಶ್ರೀ ಆರ್. ಅಶೋಕ್ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸಿದ್ದರಾಮಯ್ಯನವರು, ಇಲ್ಲಿ ಕುಳಿತುಕೊಂಡು ಹಿಂದೆ ಆ ಸಂದರ್ಭದಲ್ಲಿ ಏನು ಮಾತನಾಡಿದ್ದಾರೆಂದು ರೆಕಾರ್ಡ್ ತರಿಸಿ ತೋರಿಸಿ ದಾಖಲೆಗಳನ್ನು ತರಿಸಿದರೆ ಏನು ಮಾತನಾಡಿದ್ದಾರೆಂದು ಗೊತ್ತಾಗುತ್ತದೆ...

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾನು ಏನು ಮಾತನಾಡಿದ್ದೇನೆಂದು ದಾಖಲೆಗಳನ್ನು ತೆಗೆದು ಅಲ್ಲಿ ಇಡಿ ಅವತ್ತು ಆ ಸನ್ನಿವೇಶಕ್ಕೆ ಅ ರೀತಿ ಮಾತನಾಡಿರುತ್ತಾರೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಅವತ್ತು ಈ ಸನ್ನಿವೇಶ ಬಂದಿತ್ತು. 2003 ಫೆಬ್ರವರಿಯಲ್ಲಿ ಏಳು ದಿವಸ ನೀರು ಬಿಟ್ಟಿದ್ದೀರಿ, ದಾಖಲೆ ಇದೆ ಏನು ಮಾತನಾಡುತ್ತೀರಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅಗ ನಾನು ಇರಲಿಲ್ಲ..

(ಗೊಂದಲ)

ಅಧ್ಯಕ್ಷರು: ಇದನ್ನು ಮುಕ್ತಾಯ ಮಾಡೋಣ, ನಾನು ಮಾತನಾಡುವುದಕ್ಕೆ ಅವಕಾಶ ಕೊಟ್ಟಿಲ್ಲ, ಯಾವುದೂ ದಾಖಲೆಗೆ ಹೋಗುವುದಿಲ್ಲ, ಈಗ ಶೂನ್ಯವೇಳೆ ತೆಗೆದುಕೊಳ್ಳೋಣ, ಜಯಚಂದ್ರರವರು ಮಾತನಾಡುವುದು

ಶ್ರೀ ಹೆಚ್.ಸಿ.ಬಾಲಕೃಷ್ಣ : ಮುಖ್ಯಮಂತ್ರಿಗಳು ಮಾತನಾಡಿದ್ದಾರೆ, ಒಂದೇ ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ.

(ಗೊಂದಲ)

ಅಧ್ಯಕ್ಷರು : ವಾಕ್ ಔಟ್ ಎಲ್ಲಾ ಮಾಡಿ ಆಗಿದೆ, ಮತ್ತೆ ಕೇಳುವುದು ಬೇಡ, ತಾವು ಕುಳಿತುಕೊಳ್ಳಿ, ಯಾವುದೂ ದಾಖಲೆಗೆ ಹೋಗುವುದಿಲ್ಲ, ಮತ್ತೆ ಮತ್ತೆ ಕೇಳುವುದು ಬೇಡ, ನೀವು ವಾಕ್ ಔಟ್ ಮಾಡಿದ ಮೇಲೆ ಮತ್ತೆ ಏನು?

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ನಾನು ಒಂದೇ ಕ್ಲಾರಿಫಿಕೇಷನ್ ಕೇಳುವುದು, ಹೆಚ್ಚಿಗೆ ಕೇಳುವುದಿಲ್ಲ..

ಅಧ್ಯಕ್ಷರೆ : ಒಂದು ಬಾರಿ ವಾಕ್‌ಔಟ್ ಮಾಡಿದ ಮೇಲೆ ಇನ್ನೇನು? ಹೇಳುವುದನ್ನೆಲ್ಲಾ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ, ಮತ್ತೆ ಮತ್ತೆ ಏನು ಹೇಳುವುದಕ್ಕೆ ಇರುತ್ತದೆ?

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶಂಕರಲಿಂಗೇಗೌಡರು ಸದನದ ಬಾವಿಗೆ ಬಂದು ಧರಣಿ ಕುಳಿತುಕೊಂಡರು)

ಶ್ರೀ ಹೆಚ್.ಸಿ.ಬಾಲಕೃಷ್ಣ :– ಮಾನ್ಯ ಅಧ್ಯಕ್ಷರೆ ಒಂದೇ ಕ್ಲಾರಿಫಿಕೇಷನ್, ದಯಮಾಡಿ ನಮ್ಮ ಭಾವನೆಗಳನ್ನು ಅರ್ಥ ಮಾಡಿಕೊಳ್ಳಿ.

ಅಧ್ಯಕ್ಷರು : ಮಾನ್ಯ ಶಂಕರಲಿಂಗೇಗೌಡರೆ, ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ, ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ, ದಾಖಲೆಗೆ ಹೋಗುವುದಿಲ್ಲ.. ಯಾವುದೂ ದಾಕಲೆಗೆ ಹೋಗುವುದಿಲ್ಲ.

(ಮಾನ್ಯ ಅಧ್ಯಕ್ಷರ ಆದೇಶದಂತೆ ದಾಕಲು ಮಾಡಿರುವುದಿಲ್ಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಮುಂಖ್ಯಮಂತ್ರಿಗಳು, ವಕೀಲರ ಸಲಹೆ ಮೇರೆಗೆ ನಾವು ನೀರು ಬಿಟ್ಟಿದ್ದೇವೆ, ಒಂದು ರಿವ್ಯೂ ಪೆಟಿಷನ್ ಹಾಕಬೇಕೆಂದು ಹೇಳಿದರು. ನೀವು ರಿವ್ಯೂ ಪಿಟಿಷನ್ ಹಾಕಿ ಈ ರಿವ್ಯೂ ಪೆಟಿಷನಲ್ಲೂ ಕೂಡ ಯಾವುದೇ ಕಾರಣಕ್ಕೂ ಕೂಡ ನೀವು ನೀರನ್ನು ಬಿಡಲೇಬೇಕೆಂದು ಆದೇಶ ಮಾಡಿದರೆ ಸರ್ಕಾರದ ಉತ್ತರವೇನು?

ಅಧ್ಯಕ್ಷರು : ಈಗಲೇ ಅಲ್ಲಿ ಏನಾಗುತ್ತದೆ ಎಂದು ಊಹೆ ಮಾಡಿಕೊಂಡು ಉತ್ತರ ಹೇಳಿ ಎಂದರೆ ಹೇಗೆ? This is a bsurd.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ನಾಳೆ ಸರ್ಕಾರ ಪುನಃ ನೀರನ್ನು ಬಿಟ್ಟರೆ, ಅದಕ್ಕೆ ಸರ್ಕಾರ ಉತ್ತರ ಹೇಳಬೇಕು. ರಿವ್ಯೂ ಪೆಟಿಷನ್ ಮೇಲೆ ನೀರನ್ನು ಬಿಡಲೇಬೇಕೆಂದು ಕೋರ್ಟ್ ಹೇಳಿದರೆ ಸರ್ಕಾರದ ಉತ್ತರವೇನು? ಕಬ್ಬು ಬೆಳೆಗೆ ಬಹಳ ನಷ್ಟವಾಗಿ ಅದಕ್ಕೆ ಸರ್ಕಾರ ಪರಿಹಾರ ಕೊಡುತ್ತದೆಯೇ? ನಾನು ಎರಡೇ ಪ್ರಶ್ನೆಗಳಿಗೆ ದಯಮಾಡಿ ಮುಖ್ಯಮಂತ್ರಿಗಳು ಉತ್ತರ ಹೇಳಬೇಕು. ನಮ್ಮ ಬೆಳೆ ನಷ್ಟವಾಗಿದೆ ಅದಕ್ಕೆ ಸರ್ಕಾರ ಪರಿಹಾರ ಕೊಡಬೇಕು, ಅದು ಹೇಳುವುದಿಲ್ಲ, ಇದು ಹೇಳುವುದಿಲ್ಲವೆಂದರೆ ಹೇಗೆ?

(ಗೊಂದಲ)

(ಈ ಸಂದರ್ಭದಲ್ಲಿ ಜೆ.ಡಿ.(ಎಸ್) ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಯೊಳಗೆ ಬಂದರು)

ಅಧ್ಯಕ್ಷರು : ಉತ್ತರ ಹೇಳುವಾಗ ವಾಕ್ ಔಟ್ ಮಾಡಿದಿರಿ, ಮತ್ತೆ ಆ ವಿಚಾರವನ್ನು ಎತ್ತುತ್ತೀರಿ, ಎಲ್ಲಿದೆ ಅವಕಾಶ? ನೀವು ಕುಳಿತುಕೊಳ್ಳ ಬೇಕಾಗಿತ್ತು. ನೀವು ವಾಕ್ ಔಟ್ ಮಾಡಿ ಮತ್ತೆ ಕೇಳುವುದು ಯಾವ ನ್ಯಾಯ?..

(ಗೊಂದಲ)

(ಜೆ.ಡಿ.ಎಸ್) ಪಕ್ಷದ ಮಾನ್ಯ ಸದಸ್ಯರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು) : ಇವತ್ತು ಸುಪ್ರೀಂ ಕೋರ್ಟ್ ಆರ್ಡರ್, ನೀರು ಬಿಡುವ ಬಗ್ಗೆ ಎಲ್ಲಾ ಚರ್ಚೆ ನಡೆಯುತ್ತಿದೆ ನಾವು ರಿವ್ಯೂ ಪೆಟಿಷನ್ ಅನ್ನು ಫೈಲ್ ಮಾಡುತ್ತಿದ್ದೇವೆ ಅದರ ಬಗ್ಗೆ ಮತ್ತೆ ಚರ್ಚೆ ಮಾಡೋಣ ಇವತ್ತು ಸುಪ್ರೀಂ ಕೋರ್ಟ್‌ನ ಆರ್ಡರ್ ಹಿನ್ನೆಲೆಯನ್ನು ನಾವು ಚರ್ಚೆ ಮಾಡಿದ್ದೇವೆ ಅಷ್ಟೆ ಬೇಕಾದರೆ ಮತ್ತೆ ಚರ್ಚೆ ಮಾಡೋಣ.

ಅಧ್ಯಕ್ಷರು : ದಯವಿಟ್ಟು, ತಮ್ಮ ಸ್ಥಾನಗಳಿಗೆ ತೆರಳಿ ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ..

(ಗೊಂದಲ)

ಅಧ್ಯಕ್ಷರು : ಈಗ ಸದನವನ್ನು ಪುನಃ ಮಧ್ಯಾಹ್ನ 2.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಪುನಃ ಮಧ್ಯಾಹ್ನ 2.00 ಗಂಟೆಗೆ ಸೇರುವಂತೆ ಮಧ್ಯಾಹ್ನ 1 ಗಂಟೆ 8 ನಿಮಿಷಕ್ಕೆ ಮುಂದೂಡಲಾಯಿತು.)

(ಸದನವು ಪುನಃ ಮಧ್ಯಾಹ್ನ 2.55 ಗಂಟೆಗೆ ಪ್ರಾರಂಭವಾಯಿತು)

(ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

(ಜೆ.ಡಿ.(ಎಸ್)ನ ಕೆಲವು ಸದಸ್ಯರು ಮತ್ತು ಕಾಂಗ್ರೆಸ್‌ನ ಶ್ರೀ ಕೆ.ಬಿ.ಚಂದ್ರಶೇಖರ್‌ರವರು ಸದನದ ಬಾವಿಯಲ್ಲಿದ್ದರು)

ಶ್ರೀ ಹೆಚ್.ಸಿ.ಬಾಲಕೃಷ್ಣ (ತಮ್ಮ ಸ್ಥಾನದಿಂದ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾವು ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ನಮ್ಮ ಬೃಹತ್ ನೀರಾವರಿ ಸಚಿವರು ಇಲ್ಲಿದ್ದಾರೆ. ಈಗ ನಮಗೆ ಕುಡಿಯುವ ನೀರಂತೂ ಇಲ್ಲ. ಇವತ್ತಿನ ಪರಿಸ್ಥಿತಿ ನೋಡಿದರೆ ರೈತರ ಕಷ್ಟ ಬಹಳಷ್ಟಿದೆ. ಆದುದರಿಂದ perennial long term crop ಏನಿದೆ, ಅದಕ್ಕೆ ಪರಿಹಾರವನ್ನು ಘೋಷಣೆ ಮಾಡಲೇಬೇಕು ಎಂದು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ. ಸರ್ಕಾರ ಇದಕ್ಕೆ ಉತ್ತರವನ್ನು ಕೊಡಬೇಕು.

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು) : ನನಗೆ ಅರ್ಥವಾಗುತ್ತಿಲ್ಲ. ಈಗಾಗಲೇ ನಾವು ಡಿಸೆಂಬರ್ ಅಂತ್ಯ ಮತ್ತು ಜನವರಿ 15ರೊಳಗೆ ಭತ್ತದ ಬೆಳೆಗೆ ಏನು ನೀರು ಬಿಡಬೇಕಾಗಿತ್ತು, ಆ ರೀತಿ ಬಿಟ್ಟಿದ್ದೇವೆ. ಮತ್ತೆ ಆ season ಮುಗಿದಿದೆ. ಈಗ ಯಾವ ರೀತಿ ಪರಿಹಾರ ಕೊಡುವುದಕ್ಕೆ ಸಾಧ್ಯ? Season ಮುಗಿದಿದೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಇಡೀ ವರ್ಷ ನೀರಿನ ಕೊರತೆಯಾಗಿರುವುದು, ಒಳಹರಿವಿನ ಕೊರತೆಯಾಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ನೀರಿದ್ದೂ ಬಿಡಲಿಲ್ಲವೆಂದರೆ ಆ ಮಾತು ಬೇರೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ನೀರಿದ್ದರೆ ನಾವು ಪರಿಹಾರ ಕೇಳುತ್ತಿರಲಿಲ್ಲ. ನೀರಿಲ್ಲದಿರುವುದರಿಂದಲೇ ಪರಿಹಾರ ಕೇಳುತ್ತಿದ್ದೇವೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಈಗಾಗಲೇ ತಮಿಳುನಾಡಿನಲ್ಲಿ ಪರಿಹಾರ ಘೋಷಣೆ ಮಾಡಿದ್ದಾರೆ. ತಮಿಳುನಾಡಿನಲ್ಲಿ ಕೊಡಲಿಕ್ಕೆ ನಿಮ್ಮ ಸರ್ಕಾರಕ್ಕೆ ಏನು ತೊಂದರೆ? ರೈತರ ಪರ ಸರ್ಕಾರ ಎಂದು ಘೋಷಣೆ ಮಾಡುತ್ತೀರಿ, ನೀವು ರೈತರ ಸಮಸ್ಯೆಯನ್ನು ನಿವಾರಣೆ ಮಾಡುವುದು ಹೇಗೆ?

ಶ್ರೀ ಬಂಡೆಪ್ಪ ಖಾಶೆಂಪೂರ್ (ತಮ್ಮ ಸ್ಥಾನದಿಂದ) : 1 ಲಕ್ಷ 17 ಸಾವಿರ ಕೋಟಿ ರೂಪಾಯಿಗಳ ಬಜೆಟ್ ಮಂಡನೆ ಮಾಡಿ ರೈತರ ಪರವಾಗಿ ಮಾಡದಿದ್ದರೆ ಹೇಗೆ?

ಶ್ರೀ ಬಸವರಾಜ ಬೊಮ್ಮಾಯಿ : ನೋಡಿ ಕೆಆರ್‌ಎಸ್‌ನ ICC ಸಭೆಯಲ್ಲಿ ಏನು ನಿಗದಿತ ದಿನಾಂಕವಿತ್ತು, ಅಲ್ಲಿಯವರೆಗೂ ಕೂಡ ನಾವು ನೀರು ಕೊಟ್ಟಿದ್ದೇವೆ. ಕೆಲವು ವಿಚಾರಗಳನ್ನು, ಎಲ್ಲಾ ವಿವರಗಳನ್ನೂ ಇಲ್ಲಿ ಹೇಳುವುದು ಬೇಡವೆನ್ನುವುದು ನನ್ನ ಅಭಿಪ್ರಾಯ. ನಾನು ಸೂಕ್ಷ್ಮವಾಗಿ ಹೇಳಿದ್ದೇನೆ.

(ಶ್ರೀ ಸಿ.ಎಸ್.ಪುಟ್ಟರಾಜುರವರು ಸದನದ ಬವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು : Please, ತಾವು ತಮ್ಮ ಸ್ಥಳಕ್ಕೆ ಹೋಗಿ ಮಾತನಾಡಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ನೀವು ICC meeting ನಲ್ಲಿ ತೀರ್ಮನವಾಗಿರುವಂತೆ ಕೊಡಿ. ಎಲ್ಲಾ ಬೆಳೆಗಳಿಗೆ ನಾವು ಪರಿಹಾರ ಕೇಳುತ್ತಿಲ್ಲ. Long term crop ಗೆ ICC meeting ನಲ್ಲಿ ತೀರ್ಮಾನ ಮಾಡಿದ್ದೀರಲ್ಲ, ಆ ಬೆಳೆಗಳಿಗೆ ನೀರಿಲ್ಲದೆ ನಷ್ಟವಾಗಿ, ತೊಂದರೆ ಅನುಭವಿಸಿದವರಿಗೆ ಪರಿಹಾರ ಕೊಡಿ ಎಂದು ಕೇಳುತ್ತಿದ್ದೇವೆ.

ಶ್ರೀ ಬಸವರಾಜ ಬೊಮ್ಮಾಯಿ : ಪ್ರತಿ ವರ್ಷಕ್ಕಿಂತ 40% inflow ಕಡಿಮೆ ಇದೆ. KRS ಅಲ್ಲ ಕಬಿನಿಯಲ್ಲೂ, ಹೇಮಾವತಿ ನದಿಯಲ್ಲೂ ಕೂಡ ಕಡಿಮೆಯಾಗಿದೆ. ಎಲ್ಲರೂ ಕೂಡ ನಷ್ಟ ಅನುಭವಿಸಿದಂಥವರೇ ಇದ್ದಾರೆ. ಕೊನೆಯ ದಿನದವರೆಗೂ ನಾವು ನೀರು ಕೊಟ್ಟಿದ್ದೇವೆ. ಇಂಥ ಸಂದರ್ಭದಲ್ಲಿ ಬೆಳೆ ಪರಿಹಾರ ಕೊಡುವಂಥದ್ದು ಹೇಗೆ ಸಾಧ್ಯವಾಗುತ್ತದೆನ್ನುವಂಥದ್ದನ್ನು ತಾವು ಹೇಳಿ.

(ಶ್ರೀ ಸಿ.ಎಸ್. ಪುಟ್ಟರಾಜುರವರು ತಮ್ಮ ಸ್ಥಾನಕ್ಕೆ ತೆರಳಿದರು)

ಶ್ರೀ ಸಿ.ಎಸ್. ಪುಟ್ಟರಾಜು : ನೀರಾವರಿ ಸಲಹಾ ಸಮಿತಿಯಲ್ಲಿ ಸ್ಪಷ್ಟವಾಗಿ ಭತ್ತದ ಬೆಳೆಗಷ್ಟೇ ನಾವು ನೀರು ಕೊಡಲಿಕ್ಕಾವುದಕ್ಕಾಗುವುದಿಲ್ಲ–ವೆಂದು ಹೇಳಿದ್ದಾರೆ. ನಾವು ಈ ಸಾಲಿನಲ್ಲಿ ಭತ್ತದ ಬೆಳೆ ಬೆಳೆಯುತ್ತಿಲ್ಲ. ಬೆಳೆದು ನಿಂತಿರುವ ಕಬ್ಬಿಗೆ ಇವತ್ತು ನೀರು ಕೊಡಲಿಕ್ಕೆ ಸರ್ಕಾರಕ್ಕೆ ವಿಫಲವಾಗಿದೆ. ಆ ವಿಚಾರದಲ್ಲಿ ಸಾಕಷ್ಟು ನೀರು ಇದ್ದರೂ ಕದ್ದುಮುಚ್ಚಿ ಇವತ್ತು ತಮಿಳುನಾಡಿಗೆ ನೀರು ಬಿಡುವ ಕೆಲಸ ಆಗಿದೆ. ಬೆಳೆದು ನಿಂತಿರುವ ಕಬ್ಬನ್ನು ರಕ್ಷಣೆ ಮಾಡುವಂಥದ್ದು ತಮ್ಮ ಜವಾಬ್ದಾರಿ ಎನ್ನುವುದನ್ನೂ ಒಪ್ಪಿಕೊಳ್ಳಬೇಕು. ಇಲ್ಲದಿದ್ದರೆ, ಮುಂದೆ ಒಣಗಿರುವ ಕಬ್ಬಿಗೆ ಪರಿಹಾರ ಕೊಡುತ್ತೇವೆ ಎನ್ನುವುದನ್ನಾದರೂ ದಯಮಾಡಿ ಹೇಳಬೇಕು.

ಶ್ರೀ ಬಸವರಾಜ ಬೊಮ್ಮಾಯಿ : ಜಲ ಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿ ICC ಸಭೆಗಳನ್ನು ಮಾಡಿ ಏನು ನೀರು ಕೊಡಬೇಕೋ

ಕೊಟ್ಟಿದ್ದೇವೆ. ಇನ್ನು, sem-dry crop ಹಾಕಬೇಕು, ಭತ್ತ ಹಾಕಬಾರದೆಂದು ನಾವು ಆಗಲೇ notice ಕೂಡ issue ಮಾಡಿದ್ದೇವೆ, pamphlet ಕೂಡ ಹಂಚಿದ್ದೇವೆ ಆದರೂ ಕೂಡ ಮಾಡಿದ್ದಾರೆ. ಆದರೂ ಕೂಡ ಇರುವಂಥ ನೀರಿನಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ICC ಸಭೆಯ ಕೊನೆಯ ದಿನದವರೆಗೂ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಯಶಸ್ವಿ ಕೂಡ ಆಗಿದ್ದೇವೆ. ಇಲ್ಲಿ ಅವರು Perennial crop ಕಬ್ಬು ಇತರೆ ಬಗ್ಗೆ ಹೇಳಿದರು. ಇದು Agriculture Department ಗೆ ಸಂಬಂಧಪಟ್ಟಿದ್ದು. ಅವರು assess ಮಾಡಿ ತೀರ್ಮಾನವನ್ನು ತೆಗೆದುಕೊಳ್ಳಬೇಕು. ನನ್ನ ವ್ಯಾಪ್ತಿಯಲ್ಲಿ ಏನಿದೆ ಅದರ ಪ್ರಕಾರ ಕೊನೆಯವರೆಗೂ ನಾವು ನೀರು ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟರಾಜು : ದಯಾಮಾಡಿ, ನೀರಾವರಿ ಸಚಿವರು ಈ ಮಾತು ಹೇಳಿ ಸುಮ್ಮನಿರುವುದಕ್ಕೆ ಆಗುವುದಿಲ್ಲ. ಇದು ಸರ್ಕಾರದ ಜವಾಬ್ದಾರಿ. ನೀವು ಸರ್ಕಾರದ ಅಂಗವಾಗಿ ಕೆಲಸ ಮಾಡುತ್ತಿದ್ದೀರಿ. ದಯಮಾಡಿ, ತಾವು ಕಬ್ಬಿನ ಬೆಳೆಯನ್ನು ರಕ್ಷಣೆ ಮಾಡುತ್ತೇವೆಂದು ಹೇಳಬೇಕು.

ಶ್ರೀ ಬಸವರಾಜ ಬೊಮ್ಮಾಯಿ : ಒಂದು ಕೆಲಸ ಮಾಡೋಣ. ಮಾನ್ಯ ಮುಖ್ಯಮಂತ್ರಿಯವರು ಬಂದು ಇದರ ಬಗ್ಗೆ ಆಮೇಲೆ ಒಂದು ಹೇಳಿಕೆ ಕೊಡುತ್ತಾರೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಮುಖ್ಯಂಮತ್ರಿಯವರು ಬರಲಿ.

(ಗೊಂದಲ)

ಅಧ್ಯಕ್ಷರು : ಅಲ್ಲಿಯವರೆಗೆ ಬೇರೆ ವಿಷಯದ ಬಗ್ಗೆ ಚರ್ಚೆ ಮಾಡೋಣ.

(ಗೊಂದಲ)

ಅಧ್ಯಕ್ಷರು : ಅವರು ಬಂದ ತಕ್ಷಣ ಉತ್ತರ ಕೊಡಿಸೋಣ.

(ಈ ಹಂತದಲ್ಲಿ ಶ್ರೀ ಸಿ.ಎಸ್. ಪುಟ್ಟರಾಜುರವರು ಸದನದ ಬಾವಿಗೆ ಬಂದರು)

ಶ್ರೀ ಬಸವರಾಜ ಬೊಮ್ಮಾಯಿ : ಇನ್ನೊಂದು ಮಾಹಿತಿ ಏನೆಂದರೆ, ಮಾನ್ಯ ಮುಖ್ಯಮಂತ್ರಿಯವರು ಮಧ್ಯಾಹ್ನ 3 ಗಂಟೆಗೆ ಕಾವೇರಿ ವಿಚಾರದಲ್ಲಿ ಮಾಜಿ ಪ್ರಧಾನ ಮಂತ್ರಿಗಳ ಸಮಯ ಕೇಳಿದ್ದಾರೆ. ಆ ಮೀಟಿಂಗ್ ಆದತಕ್ಷಣ ಈ ಸದನಕ್ಕೆ ಬರುತ್ತಾರೆ. ಆಮೇಲೆ ಅವರು Agriculture Department ನವರ ಜೊತೆ ಚರ್ಚೆ ಮಾಡಬೇಕಾಗುತ್ತದೆ. ಹಣಕಾಸು ಇಲಾಖೆಯವರ ಜೊತೆ ಚರ್ಚೆ ಮಾಡಬೇಕಾಗುತ್ತದೆ. ಯಾವುದೇ ರೀತಿ ಏಕಮುಖವಾಗಿ ನಾವು ಹೇಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಮಾನ್ಯ ಮುಖ್ಯಮಂತ್ರಿಯವರು ಬಂದು ಒಂದು statement ಮಾಡುತ್ತಾರೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ತಾವು ಹೇಳಿ, ಮಾನ್ಯಮುಖ್ಯಮಂತ್ರಿ-ಯವರು ಒಪ್ಪುತ್ತಾರೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು) : ನನ್ನ ಕಡೆಯಿಂದ ಏನು ವಾಸ್ತವಾಂಶವಿದೆ ಅದನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ತಿಳಿಸುತ್ತೇನೆ. ಅವರು ಎಲ್ಲ ಇಲಾಖೆಗಳವರ ಜೊತೆ ಚರ್ಚೆ ಮಾಡಿ, ಪರಿಶೀಲನೆ ಮಾಡಿ ಒಂದು statement ಮಾಡುತ್ತಾರೆ.

ಅಧ್ಯಕ್ಷರು : ಅವರು statement ಮಾಡಲಿ. ಅಲ್ಲಿಯವರೆಗೆ ಸಹಕರಿಸಿ. ಮಾನ್ಯ ಮುಖ್ಯಮಂತಿಯವರು ಸಭೆಗೆ ಹೋಗಿದ್ದಾರೆ. ಈಗಾಲೇ statement ಕೊಡಬೇಕೆಂದರೆ ಹೇಗೆ? ತಾವು ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ. ಮಾನ್ಯಮುಖ್ಯಮಂತ್ರಿಯವರು ಬರಲಿ. ಅವರು ಬರುವವರೆಗೂ ತಾಳ್ಮೆ ಇಲ್ಲವೆಂದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಮಾನ್ಯಮುಖ್ಯಮಂತ್ರಿಯವರು ಬರುವವರೆಗೆ ತಾವು ತಮ್ಮ ಸ್ಥಾನಗಳಿಗೆ ಹೋಗಿ ಸಹಕರಿಸಿ. ಅವರು ಬಂದ ಮೇಲೆ statement ಕೊಡಿಸೋಣ.

ಡಾ: ಹೆಚ್.ಸಿ.ಮಹದೇವಪ್ಪ : It is a normal practice.

ಅಧ್ಯಕ್ಷರು : ಈಗ ಆ subject ಮುಗಿಯಿತು, ಬೇರೆ ವಿಷಯ ತೆಗೆದುಕೊಳ್ಳೋಣ.

(ಗೊಂದಲ)